ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಮಾರ್ಚ್ 13, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 301 RNI : 27369/75

# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಮಂಡಳಿ ಪರೀಕ್ಷೆಗೆ ಸುಪ್ರೀಂ ತಡೆ

### ಹಾಲಿ ನಡೆಯುತ್ತಿದ್ದ 5, 8, 9ನೇ ತರಗತಿ ಪರೀಕ್ಷೆ ಮುಂದೂಡಿಕೆ



ಬೆಂಗಳೂರು, ಮಾ. 12 - ಈಗಾಗಲೇ ಆರಂಭವಾಗಿರುವ 5,8 ಮತ್ತು 9ನೇ ತರಗತಿಗಳ ಬೋರ್ಡ್ ಪರೀಕ್ಷೆಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದ್ದು, ಶಿಕ್ಷಣ ಇಲಾಖೆ ಪರೀಕ್ಷೆಗಳನ್ನು ಮುಂದೂಡಿದೆ.

5, 8 ಮತ್ತು 9 ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಸಲು ಅನುಮತಿ ನೀಡಿದ್ದ ಹೈಕೋರ್ಟ್ ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದವು. ಈ ಬಗ್ಗೆ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಪರೀಕ್ಷೆಗಳನ್ನು ನಡೆಸದಂತೆ ತಡೆ ನೀಡಿದೆ.

ಈ ಹಿನ್ನೆಲೆಯಲ್ಲಿ ಬೋರ್ಡ್ ಪರೀಕ್ಷೆಗಳನ್ನು ಶಿಕ್ಷಣ ಇಲಾಖೆ ಮುಂದೂಡಿದೆ. ಈ ಬಗ್ಗೆ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತಕ್ಕೆ ಸರಬರಾಜಾಗಿರುವ ಪ್ರಶ್ನೆಪತ್ರಿಕೆಗಳನ್ನು ತಮ್ಮ ಹಂತದಲ್ಲೇ ಸಂರಕ್ಷಿಸಿ ಸುರಕ್ಷಿತವಾಗಿಟ್ಟುಕೊಳ್ಳಲು ಎಲ್ಲಾ ಬ್ಲಾಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪ ನಿರ್ದೇಶಕರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕರ್ನಾಟಕ ಹೈಕೋರ್ಟ್ ಏಕ ಸದಸ್ಯ ಪೀಠ ಮಾರ್ಚ್ 6 ರಂದು ಬೋರ್ಡ್ ಪರೀಕ್ಷೆಗಳನ್ನು ನಡೆಸುವ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ, ಬೋರ್ಡ್ ಪರೀಕ್ಷೆ ನಡೆಸಲು ಅನುಮತಿ ನೀಡಿತ್ತು. ಈಗ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠದ ಮಧ್ಯಂತರ ಆದೇಶವನ್ನು ರದ್ದುಗೊಳಿಸಿದೆ. ರಾಜ್ಯಾದ್ಯಂತದ ಶಾಲೆಗಳ 28 ಲಕ್ಷ ವಿದ್ಯಾರ್ಥಿ ಗಳು ಬೋರ್ಡ್ ಪರೀಕ್ಷೆ ಬರೆಯುತ್ತಿದ್ದು, ಅವರ ಭವಿಷ್ಯ ಈಗ ಅತಂತ್ರವಾಗಿದೆ. 11 ತರಗತಿ ಪರೀಕ್ಷೆಗಳು ಈಗಾಗಲೇ ಮುಕ್ತಾಯವಾಗಿವೆ. 5, 8 ಮತ್ತು 9ನೇ ತರಗತಿಗೆ ಪರೀಕ್ಷೆಗಳು ಸೋಮವಾರದಿಂದ ಆರಂಭವಾಗಿದ್ದವು.

## ದೇಶ ಮತ್ತೆ 'ಚಿನ್ನದ ಹಕ್ಕಿ'ಯಾಗಲಿ

### ದಾವಣಗೆರೆ ವಿ.ವಿ. 11ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಗೆಹ್ಲೋಟ್ ಆಶಯ

ದಾವಣಗೆರೆ, ಮಾ. 12 - ದೇಶದ ಅಭಿವೃದ್ಧಿಯ ಹಾದಿಯಲ್ಲಿ ಸರ್ಕಾರ ಹಾಗೂ ಅಧಿಕಾರಿಗಳೊಂದಿಗೆ ಸಾರ್ವಜನಿಕರೂ ಸಂಪೂರ್ಣ ಕೈ ಜೋಡಿಸಬೇಕು. ಆಗ ಮಾತ್ರ ತ್ವರಿತವಾಗಿ ಹಾಗೂ ಕಡಿಮೆ ವೆಚ್ಚದಲ್ಲಿ ಪ್ರಗತಿ ಕಾಣಲು ಸಾಧ್ಯ ಎಂದು ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯ ಪಟ್ಟರು.

ದಾವಣಗೆರೆ ವಿಶ್ವವಿದ್ಯಾಲಯದ 11ನೇ ಘಟಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಹಲವಾರು ಯೋಜನೆಗಳನ್ನು ರೂಪಿಸಿವೆ. ಇವುಗಳ ಜಾರಿಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಇದ್ದಾಗ ಕಾಮಗಾರಿಗಳ ಗುಣಮಟ್ಟ ಉತ್ತಮವಾಗುತ್ತದೆ. ಯೋಜನೆಗಳು ಕಾಲಮಿತಿಯಲ್ಲಿ ಜಾರಿಯಾಗುತ್ತವೆ. ಜನರಿಗೆ ತ್ವರಿತವಾಗಿ ಯೋಜನೆಗಳ ಲಾಭ ಸಿಗುತ್ತದೆ ಎಂದು ಗೆಹ್ಲೋಟ್ ಹೇಳಿದರು.

ಭಾರತ ಈಗ ಆರ್ಥಿಕತೆಯಲ್ಲಿ ಜಗತ್ತಿನಲ್ಲೇ ಮೂರನೇ ಸ್ಥಾನಕ್ಕೆ ತಲುಪುವ ಹಾದಿಯಲ್ಲಿದೆ. 2047ರ ವೇಳೆಗೆ ಭಾರತಕ್ಕೆ ಸ್ವಾತಂತ್ರ್ಯ ದೊರೆತು ಶತಮಾನೋತ್ಸವ ತುಂಬಲಿದೆ. ಆ ವೇಳೆಗೆ ಭಾರತ ಆರ್ಥಿಕತೆಯಲ್ಲಿ ವಿಶ್ವದ ಮೊದಲನೇ ದೇಶವಾಗಬೇಕಿದೆ. ಹಾಗಾದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಆಶಯ ಈಡೇರುತ್ತದೆ ಎಂದು ರಾಜ್ಯಪಾಲರು ತಿಳಿಸಿದರು.

ಭಾರತವನ್ನು ಒಂದು ಕಾಲದಲ್ಲಿ ಬಂಗಾರದ ಪಕ್ಷಿ ಎಂದು ಕರೆಯಲಾಗುತ್ತಿತ್ತು. ಅಷ್ಟೊಂದು ಧನ ಸಂಪತ್ತು ಭಾರತದಲ್ಲಿತ್ತು ಹಾಗೂ ಆರ್ಥಿಕತೆ ಉತ್ತಮವಾಗಿತ್ತು. ಭಾರತ ಮತ್ತೆ ಬಂಗಾರದ ಪಕ್ಷಿಯಾಗಬೇಕು, ವಿಕಸಿತ ಭಾರತವಾಗಬೇಕು ಹಾಗೂ ವಿಶ್ವ ಗುರು ಆಗಬೇಕು. 2047ರ ವೇಳೆಗೆ ಈ ಗುರಿ ತಲುಪುವ ಹೊಣೆ ಈಗಿನ ಹಾಗೂ ಮುಂದಿನ ಪೀಳಿಗೆಯ ಮೇಲಿದೆ ಎಂದವರು ಹೇಳಿದರು.

ಉನ್ನತ ಶಿಕ್ಷಣ ಸಚಿವ ಹಾಗೂ ಸಮಕುಲಾಧಿಪತಿ ಡಾ. ಎಂ.ಸಿ.ಸುಧಾಕರ್ ಮಾತನಾಡಿ, ನಿರುದ್ಯೋಗ ಸಮಸ್ಯೆ ನೀಗಿಸಲು ಕೌಶಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಯಾವ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಗಳಿವೆ ಎಂದು ಅರಿತು ಶಿಕ್ಷಣ, ಕೌಶಲ್ಯತೆ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಹೆಜ್ಜೆ ಇಟ್ಟಿದೆ ಎಂದರು.

ಎಲ್ಲಾ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಚಟುವಟಿಕೆ ಗಳು ಏಕರೂಪದಲ್ಲಿರಲು ಮತ್ತು ಏಕ ಮಾದರಿಯಲ್ಲಿ ಪ್ರವೇಶ ಪ್ರಕ್ರಿಯೆಯನ್ನು ನಡೆಸಲು (4ನೇ ಪುಟಕ್ಕೆ)




ದಾವಣಗೆರೆ ವಿವಿ ಘಟಿಕೋತ್ಸವದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮಾಜಿ ಅಧ್ಯಕ್ಷ ನ್ಯಾಯಮೂರ್ತಿ ಶಿವರಾಜ ಪಾಟೀಲ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ಸಿದ್ದಪ್ಪ ಹಾಗೂ ಹಿರಿಯ ಪತ್ರಕರ್ತ, ವ್ಯಂಗ್ಯಚಿತ್ರಕಾರ ಹೆಚ್.ಬಿ.ಮಂಜುನಾಥ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಲಾಯಿತು.

## ಪದವಿ ಪಡೆದು ಮಾತು ಕೇಳದೇ ಹೊರಟರು!

ದಾವಣಗೆರೆ, ಮಾ. 12 - ದಾವಣಗೆರೆ ವಿಶ್ವ ವಿದ್ಯಾಲಯದ 11 ನೇ ಘಟಿಕೋತ್ಸವದ ವೇದಿಕೆಯಲ್ಲಿ ಪಿಎಚ್‌ಡಿ ಪದವಿ ಪಡೆದವರು ಮತ್ತು ರ್‍ಯಾಂಕ್ ಗಳಿಸಿ ಬಂಗಾರದ ಪದಕ ಪಡೆದವರು ಮರಳಿ ತಮ್ಮ ಆಸನಗಳಿಗೆ ವಾಪಸ್ಸಾಗದೇ ಕಾರ್ಯಕ್ರಮದಿಂದಲೇ ನಿರ್ಗಮಿಸಿದರು. ಇದರಿಂದ ಬಹುತೇಕ ಕುರ್ಚಿಗಳು ಖಾಲಿಯಾದವು.

ಶಿಷ್ಟಾಚಾರ ಉಲ್ಲಂಘನೆಯ ಈ ವರ್ತನೆ ಬಗ್ಗೆ ರಾಜ್ಯ ಪಾಲ ತಾವರ್ ಚಂದ್ ಗೆಹ್ಲೋಟ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ವೇದಿಕೆಯ ಮೇಲೆ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಮಾತನಾಡಿ, ಇಲ್ಲಿ ಕೆಲವರಷ್ಟೇ ಉಳಿದಿದ್ದೀರಿ. ಗುರು-ಹಿರಿಯರಿಂದ ಪದವಿ ಪಡೆದೆವು, ಇನ್ನು ನಮ್ಮ ಕೆಲಸ ಮುಗಿಯಿತು, ಇಲ್ಲಿಂದ ಹೊರಡೋಣ ಎಂಬ ಪ್ರವೃತ್ತಿ ಸರಿಯಲ್ಲ. ಯಾವುದೇ ಕಾರ್ಯಕ್ರಮದಲ್ಲೇ ಆಗಲೀ, ಕೊನೆಯವರೆಗೂ ಇರಬೇಕು. ಅತಿಥಿಗಳ ಭಾಷಣ ಕೇಳಿ ಪ್ರೇರೇಪಿತರಾಗಬೇಕು ಎಂದರು.

ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ಘಟಿಕೋತ್ಸವ ಪ್ರತಿಯೊಬ್ಬರ ವಿದ್ಯಾರ್ಥಿಯ ಜೀವನದ ಮಹತ್ತರ ಘಟ್ಟ. ಈ ಘಟಿಕೋತ್ಸವದಲ್ಲಿ ಭಾಗವಹಿಸುವುದು ಅದೃಷ್ಟದ ಸಂಕೇತ. ರಾಜ್ಯಪಾಲರಿಂದ ಪ್ರಶಸ್ತಿ ಪಡೆಯುವುದು ಅದಕ್ಕಿಂತಲೂ ವಿಶೇಷ. ಇಂತಹ ಸಂದರ್ಭದಲ್ಲಿ ಪಿಎಚ್‌ಡಿ ಮತ್ತು ರ್‍ಯಾಂಕ್ ಗಳಿಸಿ ಚಿನ್ನದ ಪದಕ ಪಡೆದವರು ಕಾರ್ಯಕ್ರಮ ಪೂರ್ಣಗೊಳ್ಳುವವರೆಗೂ ಇರಬೇಕಾಗಿರುವುದು ಎಲ್ಲರಿಗೂ ಶೋಭೆ ತರುವ ವಿಚಾರ ಎಂದರು.

## ನಿರಂತರ ಕಲಿಕೆಯೇ ಬೆಳವಣಿಗೆ ಮಾರ್ಗ

ಕೃತಕ ಬುದ್ಧಿವಂತಿಕೆಯ ಈ ಕಾಲಮಾನದಲ್ಲಿ ಕಾಲೇಜುಗಳಲ್ಲಿ ಪಡೆದ ಪದವಿ ಹೆಚ್ಚು ಕಾಲ ಉಪಯುಕ್ತವಾಗಿರದು. ಈಗ ಜೀವನದಲ್ಲಿ ನಿರಂತರ ಕಲಿಕೆಯೇ ಬೆಳವಣಿಗೆಯ ಮಾರ್ಗವಾಗಿದೆ ಎಂದು ಇಸ್ರೋ ಮಾಜಿ ಮುಖ್ಯಸ್ಥ ಎ.ಎಸ್. ಕಿರಣ್ ಕುಮಾರ್ ಹೇಳಿದ್ದಾರೆ.

ದಾವಣಗೆರೆ ವಿಶ್ವವಿದ್ಯಾಲಯದ 11ನೇ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಘಟಿಕೋತ್ಸವ ಭಾಷಣ ಮಾಡಿದ ಅವರು, ಈ ಹಿಂದೆ ಪದವಿಯ (4ನೇ ಪುಟಕ್ಕೆ)

## ಹರಿಯಾಣದ ಬದಲಾವಣೆ ದೇಶದಲ್ಲೂ ಆಗಲಿದೆ : ಕಾಂಗ್ರೆಸ್

ನವದೆಹಲಿ, ಮಾ. 12 – ಹರಿಯಾಣದಲ್ಲಿ ಮುಖ್ಯಮಂತ್ರಿ ಬದಲಾವಣೆಯು ಅಲ್ಲಿನ ಅರಾಜಕತೆ ಬಿಜೆಪಿ ವಿರುದ್ಧ ಜನರ ಲ್ಲಿರುವ ಆಕ್ರೋಶ ತೋರಿಸುತ್ತಿದೆ ಎಂದು ಕಾಂಗ್ರೆಸ್ ಹೇಳಿದೆ.

ಹರಿಯಾಣ ಮುಖ್ಯಮಂತ್ರಿ ಸ್ಥಾನಕ್ಕೆ ಮನೋಹರ ಲಾಲ್ ಖಟ್ಟರ್ ರಾಜೀನಾಮೆ ನೀಡಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ನಯಾಬ್ ಸಿಂಗ್ ಸೈನಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಇದೇ ವೇಳೆ ಬಿಜೆಪಿ ಹಾಗೂ ಜನನಾಯಕ ಜನತಾ ಪಾರ್ಟಿ (ಜೆ.ಜೆ.ಪಿ.) ನಡುವಿನ ಮೈತ್ರಿ ಮುರಿದು ಬಿದ್ದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ರೈತರು, ಯುವಕರು ಹಾಗೂ ಕುಸ್ತಿ ಪಟುಗಳ ಒತ್ತಡದ ಕಾರಣದಿಂದಾಗಿ ಹರಿಯಾಣದಲ್ಲಿ ಈ ಬದಲಾವಣೆ ಆಗುತ್ತಿದೆ. ದೇಶದಲ್ಲೂ ಇದೇ ಪರಿಸ್ಥಿತಿ ಆಗಲಿದೆ ಎಂದಿದ್ದಾರೆ. ಹರಿಯಾಣದ ಜನರನ್ನು ಒಡೆಯುವ ಮೂಲಕ ಮತ ಗಳಿಸುವ ರಾಜಕೀಯ ಕಸರತ್ತು ಆರಂಭವಾಗಿದೆ. ಇದು ಮೊದಲೇ ನಿರ್ಧರಿಸಿದಂತೆ ಮಾಡುತ್ತಿರುವ ನಾಟಕ. ರಾಜ್ಯದಲ್ಲಿ ಆಗಿರುವ ಎಲ್ಲಾ ತಪ್ಪುಗಳಿಗೆ ಜೆ.ಜೆ.ಪಿ.ಯನ್ನು ದೂರುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಟೀಕಿಸಿದ್ದಾರೆ.

## ಅಪಪ್ರಚಾರ ತಡೆಗಾಗಿ ಚುನಾವಣಾ ಆಯೋಗ, ಗೂಗಲ್ ಜಂಟಿ ಕ್ರಮ

ನವದೆಹಲಿ, ಮಾ. 12 – ಅಪಪ್ರಚಾರ ತಡೆಯಲು ಹಾಗೂ ನಿಖರ ಮಾಹಿತಿಗೆ ಉತ್ತೇಜನ ನೀಡಲು ಗೂಗಲ್ ಮತ್ತು ಚುನಾವಣಾ ಆಯೋಗಗಳು ಕೈ ಜೋಡಿಸಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಗೂಗಲ್, ಜನರು ಸುಲಭವಾಗಿ ಮತದಾನ ಕುರಿತ ಮಾಹಿತಿ ಪಡೆಯಲು ನೆರವು ನೀಡಲಾ ಗುವುದು. ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಈ ಮಾಹಿತಿ ಲಭ್ಯವಿರಲಿದೆ ಎಂದು ಹೇಳಿದೆ. ಜನರು ಇತ್ತೀಚೆಗೆ ಕೃತಕ ಬುದ್ಧಿವಂತಿಕೆ ಬಳಸುವುದು ಹೆಚ್ಚಾಗುತ್ತಿದೆ. ಕೃತಕ ಬುದ್ಧಿವಂತಿಕೆ ಮೂಲಕ ರೂಪಿಸ ಲಾದ ಮಾಹಿತಿಯನ್ನು ಗುರುತಿಸಲು ಕ್ರಮ ತೆಗೆದುಕೊಳ್ಳ ಲಾಗುವುದು ಎಂದೂ (2ನೇ ಪುಟಕ್ಕೆ)

## ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ

ಬೆಂಗಳೂರು, ಮಾ. 12 - ಲೋಕಸಭಾ ಚುನಾವಣೆ ಸನಿಹದಲ್ಲಿರುವಾಗಲೇ ರಾಜ್ಯ ಸರ್ಕಾರಿ ನೌಕರರಿಗೆ ಶೇಕಡ 4ರಷ್ಟು ತುಟ್ಟಿಭತ್ಯೆ ಹೆಚ್ಚಳ ಮಾಡಲಾಗಿದೆ. ಈ ಹೆಚ್ಚಳ ಜನವರಿಯಿಂದಲೇ ಪೂರ್ವಾನ್ವಯಗೊಳ್ಳಲಿದೆ. ಏಪ್ರಿಲ್ ತಿಂಗಳ ವೇತನದಲ್ಲಿ ಈ ತುಟ್ಟಿಭತ್ಯೆ ಹೆಚ್ಚಳ ಮತ್ತು ಬಾಕಿ ದೊರೆಯಲಿದೆ.

ಮೂಲ ವೇತನದ ಶೇಕಡ 38.75 ರಿಂದ ಶೇಕಡ 42.5ಕ್ಕೆ ಪರಿಷ್ಕರಿಸಿ ತುಟ್ಟಿಭತ್ಯೆ ಮಂಜೂರು ಮಾಡಲಾಗಿದೆ. ತುಟ್ಟಿಭತ್ಯೆ ಹೆಚ್ಚಳದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 1,792 ಕೋಟಿ ರೂ. ಹೆಚ್ಚುವರಿ ಹೊರೆ ಬೀಳಲಿದೆ.

## ಕಾಂಗ್ರೆಸ್ ಸೇರಿದ ಜಯಪ್ರಕಾಶ್ ಹೆಗ್ಡೆ

ಬೆಂಗಳೂರು, ಮಾ. 12 - ಮಾಜಿ ಸಂಸದ, ಹಿರಿಯ ನಾಯಕ ಜಯಪ್ರಕಾಶ್ ಹೆಗ್ಡೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ.

ಕಾಂಗ್ರೆಸ್ ಸೇರಿದ ಜಯಪ್ರಕಾಶ್ ಹೆಗ್ಡೆ ಅವರಿಗೆ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ಅಭ್ಯರ್ಥಿ ಮಾಡುವಂತೆ ಎಐಸಿಸಿ ಸ್ಕ್ರೀನಿಂಗ್ ಕಮಿಟಿ ಪಕ್ಷದ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಿದೆ.

ಇಂದು ಸಂಜೆ ಪಕ್ಷದ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಕ್ಷ ಸೇರಿದ ಜಯಪ್ರಕಾಶ್ ಹೆಗ್ಡೆ (2ನೇ ಪುಟಕ್ಕೆ)

## ಒ.ಬಿ.ಸಿ. ಸಮುದಾಯದ ಸೈನಿ ಹರಿಯಾಣ ಸಿಎಂ


ಚಂಡೀಘಡ, ಮಾ. 12 - ನಯಾಬ್ ಸಿಂಗ್ ಸೈನಿ ಅವರಿಗೆ ಹರಿಯಾಣದ ನೂತನ ಮುಖ್ಯಮಂತ್ರಿ ಸ್ಥಾನ ದೊರೆತಿದೆ. 2014ರಲ್ಲಿ ಅನಿರೀಕ್ಷಿತವಾಗಿ ಈ ಸ್ಥಾನ ಪಡೆದಿದ್ದ ಮನೋಹರ್ ಲಾಲ್ ಕಟ್ಟರ್ ಅವರು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮಂಗಳವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಒ.ಬಿ.ಸಿ. ಸಮುದಾಯದ ನಾಯಕರಾಗಿರುವ 54 ವರ್ಷದ ಸೈನಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ.

ಖಟ್ಟರ್ ಅವರ ನಿಕಟವರ್ತಿ ಎಂದೇ ಹೇಳಲಾಗುವ ಸೈನಿ, ಚುನಾವಣಾ ವರ್ಷದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬಂದಿದ್ದಾರೆ. ಬರುವ ಅಕ್ಟೋಬರ್ ತಿಂಗಳಲ್ಲಿ ಚುನಾವಣೆ ನಡೆಯಲಿದೆ.

ಕಳೆದ ಅಕ್ಟೋಬರ್ (4ನೇ ಪುಟಕ್ಕೆ)

## ಶ್ರೀ ಗುರುರಾಜರ ಶೋಭಾಯಾತ್ರೆ



ದಾವಣಗೆರೆ, ಮಾ.12- ತೆರೆದ ವಾಹನದಲ್ಲಿ ಪುಷ್ಪ, ವಸ್ತ್ರ, ಆಭರಣಗಳಿಂದ ಅಲಂಕೃತವಾದ ವೃಂದಾವನ, ಮುಂದೆ ಪ್ರಹ್ಲಾದ ರಾಜರ ರಜತ ವಿಗ್ರಹ. ದಾಸರ ಕೀರ್ತನೆಗಳ ಗಾಯನ, ಭಕ್ತರ ಸಂಭ್ರಮ.

ಇದು, 31ನೇ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ ಎರಡನೇ ದಿನವಾದ ಮಂಗಳವಾರ ನಡೆದ ಶ್ರೀ ಗುರುರಾಜರ ಶೋಭಾಯಾತ್ರೆಯ ದೃಶ್ಯ.

ಉಡುಪಿ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ನಗರದ ಶಾಮನೂರು ರಸ್ತೆಯ ಲಕ್ಷ್ಮೀ ಫ್ಲೋರ್ ಮಿಲ್ ಬಳಿ ಶೋಭಾಯಾತ್ರೆಗೆ ಚಾಲನೆ ನೀಡಿದರು. ಅಲ್ಲಿಂದ ಆರಂಭವಾಗಿ ಬಾಪೂಜಿ ಬ್ಯಾಂಕ್ ಸಮುದಾಯ (4ನೇ ಪುಟಕ್ಕೆ)

## ಕ್ರಿಯಾಶೀಲ ಪ್ರಯತ್ನಗಳ ಅವಶ್ಯಕತೆ ಇದೆ

**ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್**

ದಾವಣಗೆರೆ,ಮಾ.12- ಮೇಡ್ ಇನ್ ಇಂಡಿಯಾ, ಮೇಕ್ ಇನ್ ಇಂಡಿಯಾ ಗುರಿ ಸಾಧಿಸುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ಅಗತ್ಯವಾಗಿದ್ದು ಈ ನಿಟ್ಟಿನಲ್ಲಿ ಇನ್ನಷ್ಟು ಕ್ರಿಯಾಶೀಲ ಪ್ರಯತ್ನಗಳ ಅವಶ್ಯಕತೆ ಇದೆ ಎಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟರು.

ಅವರು ಮಂಗಳವಾರ ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಮೃತ ಮಹೋತ್ಸವ ಭವನ ಉದ್ಘಾಟನೆ ಮಾಡಿ ವೇದಿಕೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ತಾಂತ್ರಿಕತೆ ಪ್ರಮುಖ ಪಾತ್ರ ವಹಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಂತ್ರಜ್ಞಾನಗಳನ್ನು ಉತ್ತೇಜಿಸಲು ಸಕ್ರಿಯ ಪ್ರಯತ್ನಗಳನ್ನು ಮಾಡುತ್ತಿರುವುದು ಸಂತೋಷದ ವಿಷಯ ಎಂದು ಹೇಳಿದರು.

'ಡಿಜಿಟಲ್ ಇಂಡಿಯಾ' (4ನೇ ಪುಟಕ್ಕೆ)



## ಮುಟ್ಟುಗೋಲು ಹಾಕಿಕೊಂಡ 500 ಕೋಟಿ ರೂ. ವಾಪಾಸ್ ತರಿಸಿಕೊಡಿ: ಸಚಿವ ಎಸ್ಸೆಸ್ಸೆಂ

ಇಲ್ಲಿನ ಪ್ರಾಧ್ಯಾಪಕರ ವೇತನ ಸೇರಿದಂತೆ ಎಲ್ಲಾ ಆಡಳಿತಾತ್ಮಕ ನಿರ್ವಹಣೆಗಾಗಿ ಪ್ರತಿ ತಿಂಗಳು 4 ಕೋಟಿ ರೂ. ಬೇಕಾಗಿದ್ದು ಇದರ ನಿರ್ವಹಣೆ ಕಷ್ಟವಾಗುತ್ತಿದ್ದು ಸರ್ಕಾರದಿಂದ ವೇತನ ನೀಡಲು ಕಾಲೇಜಿನ ಕುಲಪತಿಗಳು ಮನವಿ ಮಾಡಿದ್ದಾರೆ.

ಯುಬಿಡಿಟಿ ಕಾಲೇಜನ್ನು ವಿಟಿಯುಗೆ ಹಸ್ತಾಂತರಿಸಿದಾಗ 500 ಕೋಟಿ ರೂ. ಡಿಪಾಸಿಟ್ ಇತ್ತು. ಅದನ್ನು ಆದಾಯ ತೆರಿಗೆ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ತೆರಿಗೆ ಇಲಾಖೆ ಕೇಂದ್ರ ಸರ್ಕಾರದ ಅಡಿ (4ನೇ ಪುಟಕ್ಕೆ)

## ಒಂದು ನಿಲ್ದಾಣ ಒಂದು ಉತ್ಪನ್ನ ನವೀಕರಣ ಫಲಕದ ಉದ್ಘಾಟನೆ




ದಾವಣಗೆರೆ, ಮಾ.12- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ದಲ್ಲಿ, ಅತ್ಯಾಧುನಿಕ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮಹತ್ತರ ಪ್ರಯತ್ನವು ದೇಶಾದ್ಯಂತ ನಡೆಯುತ್ತಿದ್ದು ರಾಷ್ಟ್ರದ ಇತಿಹಾಸ ದಲ್ಲಿ ಮಹತ್ವದ ಮೈಲುಗಲ್ಲಾಗಿದೆ ಎಂದು ಸಂಸದರಾದ ಜಿ.ಎಂ.ಸಿದ್ದೇಶ್ವರ ತಿಳಿಸಿದರು.

ಮಂಗಳವಾರ ದಾವಣಗೆರೆ ರೈಲ್ವೇ ನಿಲ್ದಾಣದಲ್ಲಿ ನಡೆದ ಒಂದು ನಿಲ್ದಾಣ ಒಂದು ಉತ್ಪನ್ನ ನವೀಕರಣ ಫಲಕದ ಉದ್ಘಾಟನೆಯನ್ನು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ನೆರವೇರಿಸಿ ಮಾತನಾಡಿದರು.

ಇಂದು ಭಾರತೀಯ ರೈಲ್ವೆಗೆ ಸಂಬಂಧಿಸಿದ 6000 ಕ್ಕೂ ಹೆಚ್ಚು ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ದೇಶಾದ್ಯಂತ ನೆರವೇರಿಸಲಾಗುತ್ತಿದೆ. ಇದರ ಮೌಲ್ಯ 85,000 ಕೋಟಿ ರೂ.ಗಳಿಗಿಂತಲೂ ಹೆಚ್ಚಿದೆ. ಇದು ನಮ್ಮ ರಾಷ್ಟ್ರದ ಬೆಳವಣಿಗೆಯ ಭವಿ ಷ್ಯದ ಭರವಸೆಯ ಚಿತ್ರಣವನ್ನು ಮೂಡಿಸಿದೆ ಎಂದರು.

ವಂದೇ ಭಾರತ್ ರೈಲುಗಳು ಈಗ ರಾಜ್ಯದೊಳಗೆ ಕಾರ್ಯನಿರ್ವಹಿಸುತ್ತಿವೆ ಮತ್ತು ಕರ್ನಾಟಕದ ರೈಲ್ವೆ ನಿಲ್ದಾಣಗಳನ್ನು ಪುನರುಜ್ಜೀವನಗೊಳಿಸುವ ಅಭಿಯಾ ನದ ಭಾಗವಾಗಿ 44 ಕ್ಕೂ ಹೆಚ್ಚು ನಿಲ್ದಾಣಗಳ ಪುನರಾಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ವಂದೇ ಭಾರತ್ ರೈಲುಗಳು ದೇಶದ ಉದ್ದಗಲಕ್ಕೂ ಸಂಚರಿಸುತ್ತವೆ. ಕಳೆದ ದಶಕದಲ್ಲಿ ದೇಶಾದ್ಯಂತ 30, 000 ಕಿಲೋಮೀಟರ್‌ಗಿಂತ ಹೆಚ್ಚು ಹೊಸ ರೈಲ್ವೆ ಮಾರ್ಗಗಳು, ಗೇಜ್ ಪರಿವರ್ತನೆ ಮತ್ತು ರೈಲ್ವೆ ಮಾರ್ಗ ಗಳ ದ್ವಿಪಥ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಭಾರತೀಯ ರೈಲ್ವೆ 'ಭಾರತ್ ಗೌರವ್' ನಂತಹ ಥೀಮ್ ಆಧಾರಿತ ಪ್ರವಾಸಿ ರೈಲುಗಳ ಮೂಲಕ ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಭವ್ಯವಾದ ಐತಿಹಾಸಿಕ ತಾಣಗಳನ್ನು ಹೆಮ್ಮೆಯಿಂದ (2ನೇ ಪುಟಕ್ಕೆ)

## ಭಾಗ್ಯಗಳಿಗೆ ಸೋಲದೇ ಬಿಜೆಪಿ ಗೆಲ್ಲಿಸೋಣ

### ಒಬಿಸಿ ಮೋರ್ಚಾ ಸಾಮಾಜಿಕ ಸಮಾವೇಶದಲ್ಲಿ ರಘು ಕೌಟಿಲ್ಯ ಕರೆ



ದಾವಣಗೆರೆ, ಮಾ.12- ರಾಜ್ಯ ಕಾಂಗ್ರೆಸ್ ಸರ್ಕಾರ ಭಾಗ್ಯಗಳ ಆಮಿಷ ನೀಡಿ, ಕರೆಂಟ್ ಬಿಲ್ ಹೆಚ್ಚಿಸುವ ಮೂಲಕ ಜನರ ಹಣ ಕಿತ್ತುಕೊಳ್ಳುತ್ತಿದೆ. ಆದರೆ ಬಿಜೆಪಿಯು ದೇಶದ ಜನರಿಗೆ ಸೂರು ಕಲ್ಪಿಸಿ ಬದುಕು ಕಟ್ಟಿ ಕೊಟ್ಟಿದೆ ಎಂದು ರಾಜ್ಯ ಓಬಿಸಿ ಮೋರ್ಚಾ ಘಟಕದ ಅಧ್ಯಕ್ಷ ರಘು ಕೌಟಿಲ್ಯ ಕಾಂಗ್ರೆಸ್ ವಿರುದ್ಧ ಕಿಡಿ ಕಾರಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾದ ಸಾಮಾಜಿಕ ಸಮಾವೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿಂದುಳಿದ ವರ್ಗಕ್ಕೆ ಸೇರಿದ ಪ್ರಧಾನಿ ನರೇಂದ್ರ ಮೋದಿ ಅವರು ಬಲಿಷ್ಠ ರಾಷ್ಟ್ರ ನಿರ್ಮಿಸುವ ಮೂಲಕ ಪ್ರಪಂಚದ ಚಿತ್ತ ದೇಶದೆಡೆಗೆ ತಿರುಗುವಂತೆ ಮಾಡಿದ್ದಾರೆ ಎಂದರು.

ಬಿಜೆಪಿ ಸರ್ಕಾರವು ಸಣ್ಣ-ಸಣ್ಣ ಸಮಾಜಗಳಿಗೆ ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕವಾಗಿ ಸದೃಢವಾಗುವಂತೆ ಅವಕಾಶ ಕಲ್ಪಿಸಿದೆ. ಸ್ವನಿಧಿ ಯೋಜನೆ, ವಿಶ್ವಕರ್ಮ ಯೋಜನೆಗಳು ಸ್ವಾವಲಂಬಿ ಆಗುವಂತೆ ಮಾಡಿವೆ ಎಂದರು.

ಸ್ವಾವಲಂಬಿ ಭಾರತ ಆಗುವ ನಿಟ್ಟಿನಲ್ಲಿ, ಭಾರತ ಸಂಬಳ ಕೊಡುವ ರಾಷ್ಟ್ರ ಆಗಬೇಕು. ಆದ್ದರಿಂದ ಎಲ್ಲರೂ ಸೇರಿ ಮತ್ತೊಮ್ಮೆ ಮೋದಿ ಅವರನ್ನು ಗೆಲ್ಲಿಸೋಣ ಎಂದು ಹೇಳಿದರು.

ಸಂಸದ ಜಿ.ಎಂ. (4ನೇ ಪುಟಕ್ಕೆ)

## ರೈಲುಗಳ ಮೇಲೆ ಕಲ್ಲು ತೂರಾಟ : 139 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ

ದಾವಣಗೆರೆ ಮಾ. 12 - ನೈಋತ್ಯ ರೈಲ್ವೆ ವಲಯ ವ್ಯಾಪ್ತಿಯಲ್ಲಿ ಇತ್ತೀಚಿಗೆ ವಂದೇ ಭಾರತ್ ರೈಲುಗಳ ಮೇಲೆ ಕಲ್ಲು ತೂರಾಟದ ಕೆಲ ಘಟನೆಗಳು ಚಳಗೇರಿ, ಕುಮಾರಪಟ್ಟಣಂ, ಚಿಕ್ಕಬಾಣಾವರ, ಕುಪ್ಪಂ ಮತ್ತು ಧರ್ಮಾವರಂ ರೈಲು ನಿಲ್ದಾಣಗಳ ಬಳಿ ವರದಿಯಾಗಿದ್ದು.

ಇಂತಹ ಘಟನೆಗಳನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಿದ್ದು. ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ. ರೈಲ್ವೆ ರಕ್ಷಣಾ ಪಡೆ ಮತ್ತು ರೈಲ್ವೆ ಪೊಲೀಸ್ ಸಿಬ್ಬಂದಿ ಅಂತಹ ಪ್ರದೇಶಗಳಲ್ಲಿ ಜಾಗರೂಕರಾಗಿದ್ದಾರೆ.

ಯಾವುದೇ ವ್ಯಕ್ತಿ, ಕಾನೂನುಬಾಹಿರ ಕೃತ್ಯ ಅಥವಾ ಉದ್ದೇಶಪೂರ್ವಕ ಲೋಪ ಅಥವಾ ನಿರ್ಲಕ್ಷ್ಯದಿಂದ ರೈಲಿನಲ್ಲಿ ಪ್ರಯಾಣಿಸುವ ಅಥವಾ ಇರುವ ವ್ಯಕ್ತಿಯ ಸುರಕ್ಷತೆಗೆ ಅಪಾಯವನ್ನುಂಟುಮಾಡಿದರೆ ಸೆಕ್ಷನ್ 154 ರ ಅಡಿಯಲ್ಲಿ ಒಂದು ವರ್ಷದವರೆಗೆ ಜೈಲು ಶಿಕ್ಷೆ, ಮತ್ತು ದಂಡ, ವಿಧಿಸಲಾಗುವುದು ಅಥವಾ ರೈಲಿನ ರೋಲಿಂಗ್ ಸ್ಟಾಕ್ ಗೆ ಅಡ್ಡಿಪಡಿಸುವುದು ಮತ್ತು ಅಡ್ಡಿಪಡಿಸಲು ಪ್ರಯತ್ನಿಸುವುದನ್ನು ಮಾಡಿದಲ್ಲಿ ಅಂತಹ ವ್ಯಕ್ತಿಗೆ ಸೆಕ್ಷನ್ - 153 ರ ಅಡಿಯಲ್ಲಿ ಐದು ವರ್ಷಗಳವರೆಗೆ ಜೈಲು ಶಿಕ್ಷೆಗೆ ಗುರಿಯಾಗುತ್ತಾರೆ. ರೈಲುಗಳ ಮೇಲೆ ಕಲ್ಲು ತೂರಾಟದಂತಹ ಘಟನೆಗಳು ಕಂಡುಬಂದರೆ ಸಹಾಯವಾಣಿ ಸಂಖ್ಯೆ 139 ಗೆ ಕರೆಮಾಡಿ ಮಾಹಿತಿ ನೀಡುವಂತೆ ವಲಯದ ಪ್ರಧಾನ ವ್ಯವಸ್ಥಾಪಕರಾದ ಅರವಿಂದ ಶ್ರೀವಾಸ್ತವ ತಿಳಿಸಿದ್ದಾರೆ.

## ಮಲೇಬೆನ್ನೂರು: ನಾಳೆ ಬಸವೇಶ್ವರ ತೇರು

ಮಲೇಬೆನ್ನೂರು ಪಟ್ಟಣದ ಶ್ರೀ ಬಸವೇಶ್ವರ ದೇವರ ರಥೋತ್ಸವವು ನಾಳೆ ದಿನಾಂಕ 14ರ ಗುರುವಾರ ಸಂಜೆ 4.30ಕ್ಕೆ ಜರುಗಲಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಆರ್.ರವಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 8 ಗಂಟೆಗೆ ವಿವಿಧ ಪೂಜೆ ನಂತರ ಸಣ್ಣ ಉತ್ಸವದ ಮೆರವಣಿಗೆ ಮತ್ತು ರಾತ್ರಿ 9 ಕ್ಕೆ ರಥಕ್ಕೆ ಕಳಸಾರೋಹಣ ಮಾಡಲಾಗುವುದು.

ನಾಳೆ ಗುರುವಾರ ಬೆಳಿಗ್ಗೆ 8ಕ್ಕೆ ವಿವಿಧ ಪೂಜೆಗಳ ನಂತರ ಸಣ್ಣ ಉತ್ಸವದ ಮೆರವಣಿಗೆ ಮತ್ತು 9 ಗಂಟೆಗೆ ರಥಕ್ಕೆ ತೈಲಾಭಿಷೇಕ, ಮಧ್ಯಾಹ್ನ 12 ರಿಂದ ದೇವಸ್ಥಾನದಲ್ಲಿ ದಾಸೋಹ ನಡೆಯಲಿದ್ದು, ಇದೇ ದಿನ ಸಂಜೆ 4.30ಕ್ಕೆ ಗ್ರಾಮದ ಎಲ್ಲಾ ದೇವರ ಒಡಗೂಡಿ ಶ್ರೀ ಬೀರಲಿಂಗೇಶ್ವರ ಕಾರ್ಣಿಕೋತ್ಸವದ ನಂತರ ಶ್ರೀ ಬಸವೇಶ್ವರ ದೇವರ ರಥೋತ್ಸವವು ವಿಜೃಂಭಣೆಯಿಂದ ಜರುಗಲಿದೆ.

ದಿನಾಂಕ 15ರ ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ವಿವಿಧ ಪೂಜೆಗಳ ನಂತರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ದೇವಸ್ಥಾನದಲ್ಲಿ ಜವಳ, ದಿಂಡು ಉರುಳುಸೇವೆ ಸೇರಿದಂತೆ ಇತ್ಯಾದಿ ಸೇವೆಗಳು ನಡೆಯಲಿದ್ದು, ಸಂಜೆ 8 ಗಂಟೆಗೆ ಓಕುಳಿ ನಂತರ ದೇವರುಗಳನ್ನು ದೇವಸ್ಥಾನಗಳಿಗೆ ಬೀಳ್ಕೊಡಲಾಗುವುದು.

## ಕೈದಾಳೆ ಗ್ರಾಮದಲ್ಲಿ ನಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ದಾವಣಗೆರೆ,ಮಾ.12- ತಾಲ್ಲೂಕಿನ ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಟ್ರಸ್ಟ್ ವತಿಯಿಂದ ನಾಡಿದ್ದು 14ರ ಗುರುವಾರ ಬೆಳಿಗ್ಗೆ 7.45ರಿಂದ 8.15ರವರೆಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವ ಜರುಗಲಿದೆ.

ಮಧ್ಯಾಹ್ನ 1 ರಿಂದ ಸಂಜೆ 5 ರವರೆಗೆ ಜವಳ ಕಾರ್ಯಕ್ರಮ, 3 ರಿಂದ ಸಂಜೆ 6-30 ರವರೆಗೆ ಜೋಡಿ ಬಸವಗಳ ಹಾಗೂ ಗ್ರಾಮದ ಟ್ರ್ಯಾಕ್ಟರ್‌ಗಳ ಮೂಲಕ ಮೆರವಣಿಗೆಯೊಂದಿಗೆ ಪಾನಕ ವಿತರಣೆ. ಸಂಜೆ 5 ರಿಂದ ಸಂಜೆ 6-30 ರವರೆಗೆ ಅಗ್ನಿಕುಂಡ ಪೂಜೆ ಮತ್ತು ಓಕಳಿ ಹಾಗೂ ರಾತ್ರಿ 9-30 ರಿಂದ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ವೀರಗಾಸೆ, ಪುರವಂತರ ಒಡಪು ಗೀತೆಗಳೊಂದಿಗೆ ಮುಂಜಾನೆ 2-30 ಗಂಟೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಸ್ವಾಮಿಯು ನಡೆ ಮಡಿಯೊಂದಿಗೆ ಅಗ್ನಿಕುಂಡ ಪ್ರವೇಶ ಇರುತ್ತದೆ.

ದಿನಾಂಕ 15 ರಂದು ಸಂಜೆ 5 ಗಂಟೆಗೆ ದಿಬ್ಬಣ ಕಾರ್ಯಕ್ರಮವಿರುತ್ತದೆ.

## 15 ರಂದು ನೀಲಾನಹಳ್ಳಿ ಆಂಜನೇಯ ಸ್ವಾಮಿಯ ರಥೋತ್ಸವ, ಕಾರಣಿಕ

ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವ ಹಾಗೂ ಕಾರಣಿಕವು ಇದೇ ದಿನಾಂಕ 15 ರಂದು ನಡೆಯಲಿದೆ ಎಂದು ಶ್ರೀ ಆಂಜನೇಯ ಸ್ವಾಮಿ ಸೇವಾ ಸಮಿತಿ ತಿಳಿಸಿದೆ.

ಇಂದು ರಾತ್ರಿ 9.10ಕ್ಕೆ ಕಂಕಣಧಾರಣೆ. ನಾಳೆ ಗುರುವಾರ ಸಂಜೆ ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರು ಆಗಮಿಸುವುದು. ಅಂದು ರಾತ್ರಿ ಅರಿಶಿಣ, ಎಣ್ಣೆ ಕಾರ್ಯ ನಡೆಯುವುದು. ದಿನಾಂಕ 15 ರಂದು ಬೆಳಿಗ್ಗೆ 8-30ಕ್ಕೆ ರಥೋತ್ಸವ ನಡೆಯಲಿದೆ.

ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 1-30 ರವರೆಗೆ ಭಕ್ತಾದಿಗಳು ಹರಕೆ ತೀರಿಸುವುದು. ಸಂಜೆ 4-30ಕ್ಕೆ ಬೇಟೆ ಆಡುವುದು. ನಂತರ 5-30ಕ್ಕೆ ಮುಳ್ಳುಗದ್ದಿಗೆ ಏರುವುದು. ಸಂಜೆ 6-30ಕ್ಕೆ ಕಾರಣಿಕ ನುಡಿಯುವುದು. ರಾತ್ರಿ 7-30ಕ್ಕೆ ಭೂತ ಸೇವೆ, ನಂತರ 8-30ಕ್ಕೆ ಓಕಳಿ ಕಾರ್ಯ ಹಾಗೂ 9-30ಕ್ಕೆ ಗಂಗೆ ಪೂಜೆ ನೆರವೇರುವುದು ಎಂದು ಕನ್ವಿನೀಯರ್ ಎನ್. ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

# ಜನತೆಗೆ 'ಬರ'ದ ತಾಪ ಹೆಚ್ಚದಂತೆ ಮುತುವರ್ಜಿ ವಹಿಸಲು ತಾಕೀತು

## ಹರಿಹರ ತಾಲ್ಲೂಕು ಪಂಚಾಯ್ತಿ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್



ಹರಿಹರ, ಮಾ, 12- ಬರದಿಂದಾಗಿ ಬೇಸಿಗೆ ತಾಪ ಹೆಚ್ಚಾಗಿ ರೈತರ ಜಮೀನುಗಳಿಗೆ ನೀರಿನ ಕೊರತೆ, ಕುಡಿಯುವ ನೀರಿನ ತೊಂದರೆ, ವಿದ್ಯುತ್ ಸರಬರಾಜು, ಪಶುಗಳಿಗೆ ಮೇವಿನ ಕೊರತೆ ಉಲ್ಬಣಗೊಳ್ಳುವುದರಿಂದ, ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಅಧಿಕಾರಿಗಳು ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಶಾಸಕ ಬಿ.ಪಿ. ಹರೀಶ್ ತಾಕೀತು ಮಾಡಿದರು.

ನಗರದ ತಾಪಂ ಇಲಾಖೆಯ ಸಭಾಂಗಣದಲ್ಲಿ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆ ಇಲ್ಲದೆ ಡ್ಯಾಮ್ ಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದು, ಅಡಿಕೆ ಮತ್ತು ತೋಟಗಾರಿಕೆ ಬೆಳೆಗಳು ಹಾಳಾಗುವ ಸಾಧ್ಯತೆ ಹೆಚ್ಚು ಇರುವುದರಿಂದ, ಕೊನೆಯ ಭಾಗದ ರೈತರ ಪರಿಸ್ಥಿತಿ ಹದಗೆಡುವ ಸಾಧ್ಯತೆ ಇರುತ್ತದೆ. ನೀರು ಬಿಡುವ ಸಮಯದಲ್ಲಿ ರೈತರಿಗೆ ಯಾವುದೇ ರೀತಿಯ ತೊಂದರೆಗಳು ಬರದಂತೆ ಎಚ್ಚರಿಕೆ ವಹಿಸಬೇಕು. ಗ್ರಾಮಗಳಲ್ಲಿ ಸ್ವಚ್ಚತೆಗೆ ಹೆಚ್ಚು ಆದ್ಯತೆ ನೀಡಬೇಕು. ಆರೋಗ್ಯ ಇಲಾಖೆಯ ಅಧಿಕಾರಿಗಳು, ಸ್ತ್ರೀ ಶಕ್ತಿ ಸಂಘದವರು, ಆಶಾ ಕಾರ್ಯಕರ್ತೆಯರು ಮಕ್ಕಳಿಗೆ ರೋಗಗಳು ಹರಡದಂತೆ ತಡೆಯುವ ನಿಟ್ಟಿನಲ್ಲಿ ಹೆಚ್ಚು ಕಾಳಜಿಯನ್ನು ವಹಿಸಿ, ಮುಂಜಾಗ್ರತಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದು ಹೇಳಿದರು.

ಮಲೇಬೆನ್ನೂರು ಗ್ರಾಮದಲ್ಲಿ ಬರುವ ವಾರದಂದು ಹಬ್ಬ ಇರುವುದರಿಂದ ಅಲ್ಲಿನ ಜನತೆಗೆ ಕುಡಿಯುವ ನೀರು, ಸ್ವಚ್ಚತೆ ಸಮಸ್ಯೆಗಳು ಬರದಂತೆ ಹೆಚ್ಚು ಗಮನ ಹರಿಸಬೇಕು ಎಂದು ಹೇಳಿದರು.

ಅತಿ ಶೀಘ್ರದಲ್ಲಿ ಲೋಕಸಭಾ ಚುನಾವಣೆಯ ದಿನಾಂಕ ಘೋಷಣೆ ಆಗುವುದರಿಂದ ಅನುದಾನ ಬಿಡುಗಡೆ ಆಗಿರುವ ಕಾಮಗಾರಿಯನ್ನು ಆರಂಭಿಸಿ, ಅನುದಾನ ವಾಪಸ್ ಹೋಗದಂತೆ ನೋಡಿಕೊಳ್ಳಬೇಕು. ತಾಲ್ಲೂಕಿನ ಯಲವಟ್ಟಿ ಗ್ರಾಮದಲ್ಲಿ ಕೇವಲ ನೂರು ಮನೆಗಳಿಗೆ ಮಾತ್ರ ನೀರು ಸರಬರಾಜಾಗುತ್ತಿದೆ ಎಂದು ದೂರು ಬಂದಿದ್ದು, ಅದನ್ನು ಬೇಗ ಸರಿಪಡಿಸಲು ಮುಂದಾಗುವಂತೆ ಹೇಳಿದರು.

ಬರುವ 26 ರಿಂದ 6 ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಶಿಕ್ಷಣ ಇಲಾಖೆ ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು.

ಕೃಷಿ ಇಲಾಖೆ ಅಧಿಕಾರಿ ನಾರನಗೌಡ ಮಾತನಾಡಿ, ಈ ಬಾರಿ ಮಳೆಯ ಪ್ರಮಾಣ ಬಹಳ ಕಡಿಮೆ ಆಗಿದ್ದರಿಂದ 6127 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 70 ಕೃಷಿ ಹೊಂಡಗಳನ್ನು ತೆರೆಯಲಾಗಿದೆ. ಮಲೇಬೆನ್ನೂರು ಹೋಬಳಿ ಭಾಗದಲ್ಲಿ 688 ಹೆಕ್ಟೇರ್ ಭತ್ತದ ನಾಟಿ ಮಾಡಲಾಗಿದೆ. ರೈತರಿಗೆ ಅನುಕೂಲ ಆಗುವ ದೃಷ್ಟಿಯಿಂದ 10 ಲಕ್ಷದವರೆಗೆ ಸಬ್ಸಿಡಿ ರೂಪದಲ್ಲಿ ಸಾಲವನ್ನು ನೀಡಲಾಗುತ್ತದೆ. ಇಲ್ಲಿಯವರೆಗೆ 950 ಸ್ಪಿಂಕ್ಲರ್ ಯಂತ್ರಗಳನ್ನು ವಿತರಣೆ ಮಾಡಲಾಗಿದೆ. ಬಿತ್ತನೆ ಬೀಜಗಳು ಮತ್ತು ಗೊಬ್ಬರದ ದಾಸ್ತಾನು ಸಾಕಷ್ಟು ಇದ್ದು, ಯಾವುದೇ ರೀತಿಯ ಕೊರತೆ ಇರುವುದಿಲ್ಲ ಎಂದು ಹೇಳಿದರು.

ಕಾರ್ಮಿಕ ಇಲಾಖೆಯ ಅಧಿಕಾರಿ ಕವಿತಾ ಮಾತನಾಡಿ ತಾಲ್ಲೂಕಿನ 23 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ, 4445 ಕಡೆಯಲ್ಲಿ ಎನ್.ಜಿ.ಓ ರವರಿಂದ ಆರೋಗ್ಯ ತಪಾಸಣೆ ಮಾಡಲಾಗಿದೆ. ಅವರ ಕಾರ್ಯಚಟುವಟಿಕೆಗಳ ಬಗ್ಗೆ ಜಿಲ್ಲೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಬಿಇಓ ಹನುಮಂತಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಒಟ್ಟು 3268 ವಿದ್ಯಾರ್ಥಿಗಳು ಈ ಬಾರಿ ಎಸ್.ಎಸ್.ಎಲ್‌ಸಿ ಪರೀಕ್ಷೆ ಬರೆಯುತ್ತಾರೆ ಎಂದು ಹೇಳಿದರು. ತಾಲ್ಲೂಕಿನ 89 ಶಾಲೆಗಳಲ್ಲಿ ಶೌಚಾಲಯದ ಕೊರತೆ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. 11 ಶಾಲೆಗಳಲ್ಲಿ ಸರ್ಕಾರದ ಅನುದಾನ ಬಿಡುಗಡೆ ಆಗಿದ್ದು, ಕಾಮಗಾರಿ ಆರಂಭ ಮಾಡಲಾಗಿದೆ ಎಂದು ಹೇಳಿದರು.

ಬೆಸ್ಕಾಂ ಅಧಿಕಾರಿ ರಮೇಶ್ ನಾಯ್ಕ್ ಮಾತನಾಡಿ, ಅಕ್ರಮ ಸಕ್ರಮದ ಅಡಿಯಲ್ಲಿ 1299 ಅರ್ಜಿ ಸಲ್ಲಿಸಲಾಗಿತ್ತು. ಅದರಲ್ಲಿ 428 ಕ್ಕೆ ಅನುದಾನ ಬಂದಿದೆ. ರೈತರಿಗೆ ತೊಂದರೆಗಳು ಆಗದಂತೆ ದಿನಕ್ಕೆ 7 ಗಂಟೆ ವಿದ್ಯುತ್ ಸರಬರಾಜು ಮಾಡಲಾಗಿದೆ. ಅದರಲ್ಲಿ ಪ್ರಮುಖವಾಗಿ ಮನೆಗಳಿಗೆ ಯಾವುದೇ ರೀತಿಯ ತೊಂದರೆ ಬರದಂತೆ ವಿದ್ಯುತ್ ಸರಬರಾಜು ಮಾಡಲಾಗಿದೆ ಎಂದು ಹೇಳಿದರು.

ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿ ಸುರೇಶ್ ಮಾತನಾಡಿ, ಗ್ರಾಮದಲ್ಲಿ ಹಬ್ಬ ಇದ್ದು, 49 ಕಡೆಗಳಲ್ಲಿ ಬೋರ್‌ವೆಲ್ ಕೊರೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಸ್ವಚ್ಚತೆಗೆ ತೊಂದರೆಗಳು ಬರದಂತೆ ಹೊನ್ನಾಳಿ ನಗರದಿಂದ 10 ಜನ ಕಾರ್ಮಿಕರನ್ನು ಕರೆಸಿಕೊಂಡು ಸ್ವಚ್ಚತೆಗೆ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಮಲೇಬೆನ್ನೂರು ಪುರಸಭೆ ಮುಖ್ಯ ಅಧಿಕಾರಿ ಗಿರೀಶ್ ಮಾತನಾಡಿ, ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಹೆಚ್ಚು ಇದ್ದು, ಜೊತೆಗೆ ಬೋರ್‌ವೆಲ್‌ನಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. 18 ಕಡೆಗಳಲ್ಲಿ ಬೋರ್‌ವೆಲ್ ರೀ ಡ್ರಿಲ್ ಮಾಡಲಾಗಿದೆ. ಜೊತೆಗೆ 17 ಕಡೆಗಳಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಸಲಾಗಿದೆ. ಕೊಂಡಜ್ಜಿ ಮತ್ತು ದೇವರಬೆಳಕೆರೆ ಸೇರಿದಂತೆ ಹಲವಾರು ಗ್ರಾಮಗಳ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಸಮಸ್ಯೆಗಳು ಇರುವುದರಿಂದ ಜನರ ನಿರೀಕ್ಷೆಗೆ ತಕ್ಕಂತೆ ನೀರು ಸರಬರಾಜು ಮಾಡಲು ಆಗುತ್ತಿಲ್ಲ ಎಂದು ಹೇಳಿದರು.

ಆರೋಗ್ಯ ಇಲಾಖೆಯ ಅಧಿಕಾರಿ ಪ್ರಶಾಂತ್ ಮಾತನಾಡಿ, ಬೇಸಿಗೆ ಕಾಲದಲ್ಲಿ ರೋಗಗಳು ಹರಡುವುದು ಸರ್ವೇ ಸಾಮಾನ್ಯ. ಹಾಗಾಗಿ ಅದನ್ನು ತಡೆಗಟ್ಟಲು ಈಗಾಗಲೇ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಲೇಬೆನ್ನೂರು ಗ್ರಾಮದಲ್ಲಿ ವೈದ್ಯರ ಕೊರತೆ ಇರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಈ ವೇಳೆ ಪಿಡಬ್ಲ್ಯೂಡಿ ಇಲಾಖೆಯ ಶಿವಮೂರ್ತಿ, ಸಿಡಿಪಿಓ ಪೂರ್ಣಿಮಾ, ಗ್ರಾಮೀಣ ಕುಡಿಯುವ ನೀರು ಇಲಾಖೆಯ ಗಿರೀಶ್, ಗ್ರೇಡ್-2 ತಹಶೀಲ್ದಾರ್ ಶಶಿಧರಯ್ಯ, ಆರೋಗ್ಯ ಇಲಾಖೆಯ ಡಾ. ಪ್ರಶಾಂತ್, ತೋಟಗಾರಿಕೆ ಇಲಾಖೆಯ ಶಶಿಧರ್ ಸೇರಿದಂತೆ, ಇತರೆ ಇಲಾಖೆಯ ಅಧಿಕಾರಿಗಳು ತಮ್ಮ ಕಾರ್ಯಚಟುವಟಿಕೆಗಳನ್ನು ವಿವರಿಸಿದರು.

ತಹಶೀಲ್ದಾರ್ ಗುರುಬಸವರಾಜ್, ತಾಪಂ ಇಓ ರಮೇಶ್ ಸುಲ್ಫಿ, ಡಾ. ಹನುಮನಾಯ್ಕ್, ರಾಮಕೃಷ್ಣ, ತಾ.ಪಂ. ಇಓ ಲೆಕ್ಕಾಧಿಕಾರಿ ಲಿಂಗರಾಜ್, ಪೂಜಾ, ರವಿಕಿರಣ್, ನೋಂದಣಿ ಇಲಾಖೆ ಅಧಿಕಾರಿ ನಾಗರಾಜ್, ನಗರಸಭೆ ಎಇಇ ತಿಪ್ಪೇಸ್ವಾಮಿ ಇತರರು ಹಾಜರಿದ್ದರು.

## 1.24 ಕೋಟಿ ರೂ.ಗಳ ಕಾಮಗಾರಿಗಳಿಗೆ ಚಾಲನೆ ಎಪಿಎಂಸಿಗೆ ಮತ್ತೆ ಜೀವಕಳೆ : ಶಾಸಕ ಶಾಂತನಗೌಡ



ಹೊನ್ನಾಳಿ, ಮಾ.12- ರಾಜ್ಯ ಸರ್ಕಾರವು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಮೂಲಕ ವ್ಯಾಪಾರ ವಹಿವಾಟು ಚುರುಕುಗೊಳಿಸಿ, ಸಮಿತಿಗಳಿಗೆ ಮತ್ತೆ ಜೀವಕಳೆ ತರುವ ಕಾರ್ಯ ನಡೆದಿದೆ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಹೊನ್ನಾಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ 1.24 ಕೋಟಿ ರೂ.ಗಳ ವೆಚ್ಚದಲ್ಲಿ ಆರ್‌ಐಡಿಎಫ್ ಯೋಜನೆಯಡಿ ಹರಾಜು ಕಟ್ಟೆ, ಕಾಂಕ್ರಿಟ್ ರಸ್ತೆ ಹಾಗೂ ಸಿಸಿ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಸಹಾಯಕ ಇಂಜಿನಿಯರ್ ವೆಂಕಟನಾಯ್ಕ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರುದ್ರೇಶ ನಾಯ್ಕ, ಆಡಳಿತಾಧಿಕಾರಿ ಜೆ.ಪ್ರಭು, ಕಾರ್ಯದರ್ಶಿ ಮಹೇಶ್, ಗುತ್ತಿಗೆದಾರ ಮಂಜುನಾಥ್, ಎ.ಜಿ.ಪ್ರಕಾಶ್, ಶಿವಾನಂದ ವಾಲ್ಮೀಕಿ, ವಿಜಯಕುಮಾರ್, ವರ್ತಕ ಶಂಭು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ದುರ್ಗಾಂಬಿಕಾ ಜಾತ್ರೆ ಪ್ರಯುಕ್ತ ಬಡಜನರಿಗೆ ರಿಯಾಯ್ತಿ ದರದಲ್ಲಿ ಆರೋಗ್ಯ ತಪಾಸಣೆ, ಚಿಕಿತ್ಸಾ ಶಿಬಿರ

ದಾವಣಗೆರೆ, ಮಾ. 12- ನಗರ ದೇವತೆ ಶ್ರೀ ದುರ್ಗಾಬಿಕ ಜಾತ್ರೆ ಅಂಗವಾಗಿ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಎಸ್.ಎಸ್.ಆಸ್ಪತ್ರೆ ದಾವಣಗೆರೆ ಇವರಿಂದ ಸಾಮಾನ್ಯ ಮತ್ತು ಬಡ ಜನರಿಗೆ ರಿಯಾಯಿತಿ ದರದಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಇಂದಿನಿಂದ ಆರಂಭಗೊಂಡಿದ್ದು, ಇದೇ ದಿನಾಂಕ 30ರ ಶನಿವಾರದವರೆಗೆ ನಡೆಯಲಿದೆ.

ಹೊರ ರೋಗಿಗಳ ಸಮಾಲೋಚನೆ, ದಾಖಲಾತಿ ಉಚಿತ, ವಾರ್ಡ್ ಬಾಡಿಗೆ, ನರ್ಸಿಂಗ್ ಚಾರ್ಜ್, ರಕ್ತ ಪರೀಕ್ಷೆ - ಸಿಬಿಸಿ, ಆರ್‌ಬಿಎಸ್, ಆರ್‌ಎಫ್‌ಟಿ, ಮೂತ್ರ ಪರೀಕ್ಷೆ, ಇಸಿಜಿ, ಇಕೋಕಾರ್ಡಿಯಗ್ರಫಿ, ಟಿಎಂಟಿ, ಕ್ಷ-ಕಿರಣ ಪರೀಕ್ಷೆ – ಎಕ್ಸರೇ, ಯುಎಸ್‌ಜಿ ಅಬ್ಡಮೆನ್,ಯುಎಸ್‌ಜಿ ಪೆಲ್ವಿಸ್ ಹಾಗೂ ಎಲ್ಲಾ ಹೊರ ರೋಗಿ ಸೇವೆಗಳಲ್ಲಿ ಶೇ. 50 ರಷ್ಟು ವಿನಾಯಿತಿ ಇದ್ದು, ಉಪಭೋಗ್ಯ ವಸ್ತುಗಳನ್ನು ಹೊರತುಪಡಿಸಿ ಔಷಧಗಳಿಗೆ ಯಾವುದೇ ತರಹದ ರಿಯಾಯಿತಿಗಳು ಇರುವುದಿಲ್ಲ ಎಂದು ವೈದ್ಯಕೀಯ ನಿರ್ದೇಶಕರು ತಿಳಿಸಿದ್ದಾರೆ.

## ಗೂಗಲ್ ಜಂಟಿ ಕ್ರಮ

(1ನೇ ಪುಟದಿಂದ) ಗೂಗಲ್ ತಿಳಿಸಿದೆ. ಗೂಗಲ್‌ನ ಯೂಟ್ಯೂಬ್‌ನಲ್ಲಿ ಎ.ಐ. ಮೂಲಕ ರೂಪಿಸಲಾದ ವಿಡಿಯೋಗಳ ಬಗ್ಗೆ ಜನರಿಗೆ ತಿಳಿಸುವ ಅಂಶವನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದೂ ಕಂಪನಿ ಹೇಳಿದೆ.

## ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ರಾಜ್ಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ನಗರದ ಪ್ರವಾಸಿ ಮಂದಿರದಲ್ಲಿ ಇಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರ ವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್. ಕೌಲಾಪೂರೆ, ಅಧಿಕಾರಿಗಳಾದ ಸಿ. ಮಧುಸೂದನ್, ಪ್ರಭು ಬಿ. ಸೂರಿನ, ಎಚ್.ಎಸ್ ರಾಷ್ಟ್ರಪತಿ ಅಹವಾಲು ಸ್ವೀಕರಿಸುವರು. ಈ ವೇಳೆ ಭ್ರಷ್ಟಾಚಾರ ನಿರೋಧಕ ಕಾಯ್ದೆ ಹಾಗೂ ರಾಜ್ಯ ಲೋಕಾಯುಕ್ತ ಕಾಯ್ದೆ ಬಗ್ಗೆ ಅರಿವು ಮೂಡಿಸುವರು.

## ನಗರದಲ್ಲಿ ಸಂಭ್ರಮದಿಂದ ಜರುಗಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ



ದಾವಣಗೆರೆ, ಮಾ.12- ಮಹಾಶಿವರಾತ್ರಿಯ ಪ್ರಯುಕ್ತ ನಗರದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವದ ಚಾಲನೆ ನೀಡಿದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಟಸ್ಟ್‌ನ ಅಧ್ಯಕ್ಷ ಟಿ. ಬಸವರಾಜ್, ಉಪಾಧ್ಯಕ್ಷರು ತಿಮ್ಮಣ್ಣ, ಕಾರ್ಯದರ್ಶಿ ಯು. ಗಿರೀಶ್, ಖಜಾಂಚಿ ಕೆ. ಟಿ. ವೆಂಕಟೇಶ್ ಮತ್ತು ಇತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಇಂದು ಮಾದಿಗ ಸಮಾಜದಿಂದ ಜನಜಾಗೃತಿ ಸಮಾವೇಶ, ಸಾಮೂಹಿಕ ವಿವಾಹ

ಹರಿಹರ, ಮಾ. 12- ನಾಳೆ ದಿನಾಂಕ 13 ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ಮಾದಿಗ ಸಮಾಜದ ವತಿಯಿಂದ ಮಾದಾರ ಚೆನ್ನಯ್ಯ ಜಯಂತ್ಯೋತ್ಸವದ ಅಂಗವಾಗಿ ಜನ ಜಾಗೃತಿ ಸಮಾವೇಶ ಮತ್ತು ಸರಳ ಸಾಮೂಹಿಕ ವಿವಾಹ ಮಹೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದಕುಮಾರ್ ಮತ್ತು ಉಪಾಧ್ಯಕ್ಷ ಹೆಚ್. ಶಿವಪ್ಪ ತಿಳಿಸಿದರು.

ಚಿತ್ರದುರ್ಗ ಮಾದಾರ ಚೆನ್ನಯ್ಯ ಗುರುಪೀಠದ ಜಗದ್ಗುರು ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು, ಹಿರಿಯೂರು ಕೋಡಿಹಳ್ಳಿ ಮಠದ ಜಗದ್ಗುರು ಶ್ರೀ ಷಡಾಕ್ಷರಿ ಮುನಿ ದೇಶಿಕೇಂದ್ರ ಸ್ವಾಮಿಗಳು, ಕಾಗಿನಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮಿಗಳು, ವೀರಶೈವ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳು, ಮಹರ್ಷಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳು, ಎರೆಹೊಸಳ್ಳಿ ವೇಮನ ಗುರುಪೀಠದ ಜಗದ್ಗುರು ಶ್ರೀ ವೇಮಾನಂದ ಸ್ವಾಮಿಗಳು, ಮುಸ್ಲಿಂ ಸಮುದಾಯದ ಧರ್ಮಗುರು ಅಲ್ ಹಜ್ ಖಾಜಿ ಶಂಶುದ್ದೀನ್ ಸಾಬ್ ಭರ್ಕಾತಿ, ಆರೋಗ್ಯ ಮಾತೆ ಚರ್ಚ್‌ನ ಫಾದರ್ ಕೆ.ವಿ. ಜಾರ್ಜ್ ಆಗಮಿಸುವರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಉದ್ಘಾಟನೆ ಮಾಡಲಿದ್ದಾರೆ. ಡಾ. ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಡಾ. ಹೆಚ್. ವಿಶ್ವನಾಥ್ ಉಪನ್ಯಾಸ ಮಾಡಲಿದ್ದಾರೆ. ಮಾಂಗಲ್ಯ ವಿತರಣೆಯನ್ನು ಎಸ್.ಎಸ್. ಕೇರ್ ಟ್ರಸ್ಟ್‌ನ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಮಾಡುವರು. ಅಧ್ಯಕ್ಷತೆಯನ್ನು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದಕುಮಾರ್ ವಹಿಸಲಿದ್ದಾರೆ.

ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಸಂಸದ ಜಿ.ಎಂ. ಸಿದ್ದೇಶ್ವರ್, ಮಾಜಿ ಸಚಿವ ಹೆಚ್. ಆಂಜನೇಯ. ಮಾಜಿ ಸಂಸದ ಎಂ. ಚಂದ್ರಪ್ಪ ಅವರುಗಳು ಮಾದಾರ ಚೆನ್ನಯ್ಯನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಬಿ.ಪಿ. ಹರೀಶ್, ಕೆ.ಎಸ್. ಬಸವಂತಪ್ಪ, ಮಾಜಿ ಶಾಸಕರಾದ ಎಸ್ ರಾಮಪ್ಪ, ಹೆಚ್.ಎಸ್. ಶಿವಶಂಕರ್, ಕಾಂಗ್ರೆಸ್ ಪಕ್ಷದ ಯುವ ಮುಖಂಡರುಗಳಾದ ಜಿ.ಬಿ. ವಿನಯಕುಮಾರ್, ನಂದಿಗಾವಿ ಶ್ರೀನಿವಾಸ್, ಎ ಗೋವಿಂದ ರೆಡ್ಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಇತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾದಿಗ ಸಮಾಜದ ಮುಖಂಡರಾದ ಎಲ್.ಬಿ. ಹನುಮಂತಪ್ಪ, ಜಿ.ಹೆಚ್. ಸಿದ್ದಾರೂಢ, ಹನುಮಂತಪ್ಪ ದೊಡ್ಡಮನೆ, ಪಿ.ಎನ್. ವಿರುಪಾಕ್ಷಪ್ಪ, ಎಂ.ಎಸ್. ಶ್ರೀನಿವಾಸ್, ಹೆಚ್. ಶಿವಪ್ಪ, ಪರಶುರಾಮ್, ಬಿ.ಡಿ. ಬಸವರಾಜ್, ಹೆಚ್.ಎಂ. ಹನುಮಂತಪ್ಪ, ಎ.ಕೆ. ನಾಗೇಂದ್ರಪ್ಪ, ಆರ್. ಮಂಜುನಾಥ್, ಎನ್.ಕೆ. ಪ್ರಕಾಶ್, ಚೌಡಪ್ಪ ಮೇಗಳಮನೆ, ಎ.ಕೆ. ದಾನಪ್ಪ ಇತರರು ಹಾಜರಿದ್ದರು.

**ಕೊಕ್ಕನೂರು ಗ್ರಾಮದ ದಾಸರ ಶ್ರೀಮತಿ ಸುನಂದಮ್ಮ ನಿಧನ**



ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದ ಹಿರಿಯರಾದ
ದಿ. ದಾಸರ ಕೊಕ್ಕಪ್ಪ ಅವರ ಸೊಸೆ ಮತ್ತು
ಮಾಜಿ ಪ್ರಧಾನರಾದ ದಿ|| ಕೆ. ಶಾಂತರಾಜ್ ಅವರ ಪತ್ನಿ
**ಶ್ರೀಮತಿ ಸುನಂದಮ್ಮ** (68 ವರ್ಷ)
ಇವರು, ದಿನಾಂಕ 12.03.2024 ರ ಮಂಗಳವಾರ ರಾತ್ರಿ 8 ಗಂಟೆಗೆ ಅನಾರೋಗ್ಯದಿಂದ ಮಂಗಳೂರು ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಓರ್ವ ಪುತ್ರ, ನಾಲ್ವರು ಪುತ್ರಿಯರು, ಮೈದುನರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.03.2024ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಕೊಕ್ಕನೂರಿನಲ್ಲಿ ನೆರವೇರಲಿದೆ.

**ದುಃಖತಪ್ತರು : ಡಿ. ಸೋಮಶೇಖರ್ ಮತ್ತು ಡಿ. ಶಿವಮೂರ್ತಿ ಹಾಗೂ ಸಹೋದರಿಯರು, ಮಾವಂದಿರು, ಅಳಿಯಂದಿರು ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು ಕೆ.ಎಸ್. ಚಂದ್ರಶೇಖರ್ ಮತ್ತು ಸಹೋದರಿಯರು, ಮಾವಂದಿರು ಹಾಗೂ ಮಕ್ಕಳು, ದಾಸರ ವಂಶಸ್ಥರು ಹಾಗೂ ಕೊಕ್ಕನೂರು ಗ್ರಾಮಸ್ಥರು ಮತ್ತು ಬಂಧು-ಮಿತ್ರರು.**

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ಜನನ : 01.07.1975 ನಿಧನ : 06.03.2024

ಹರಪನಹಳ್ಳಿ ತಾಲ್ಲೂಕು
ಹಿರೇಮೇಗಳಗೆರೆ ಗ್ರಾಮದ ವಾಸಿ
**ಶ್ರೀ ಸಿದ್ದನಗೌಡ ಪಾಟೀಲ್**
ಅವರ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 14.03.2024ರ ಗುರುವಾರದಂದು ಬೆಳಿಗ್ಗೆ 10.30ಕ್ಕೆ ಸ್ವಗ್ರಾಮದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ವಿನಂತಿಸುತ್ತೇವೆ.

**ದುಃಖತಪ್ತ ಕುಟುಂಬ ವರ್ಗ**
ಲಿಂ|| ಶ್ರೀಮತಿ ಸರ್ವಮಂಗಳಮ್ಮ, ಲಿಂ|| ಶ್ರೀ ಪಾಟೀಲ್ ರಾಮಲಿಂಗನಗೌಡರು,
**ಧರ್ಮಪತ್ನಿ ಶ್ರೀಮತಿ ಭಾಗ್ಯ ಪಾಟೀಲ್
ವಂಶಸ್ಥರು ಮತ್ತು ಕುಟುಂಬ ವರ್ಗದವರು
ಹಿರೇಮೇಗಳಗೆರೆ ಗ್ರಾಮಸ್ಥರು ಹಾಗೂ ಬಂಧುಗಳು.**

**ಶ್ರದ್ಧಾಂಜಲಿ**



**ಶ್ರೀಮತಿ ರೇಖಾ ಅಂದನೂರು ವಿಜಯಕುಮಾರ್**
ನಿಧನ : 09.03.2024



**ಶ್ರೀಮತಿ ಸರೋಜಮ್ಮ ಅಂದನೂರು ಸಣ್ಣಕೊಟ್ರಪ್ಪ**
ನಿಧನ : 12.03.2024

ಇವರುಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಅಂದನೂರು ಬಳಗ, ದಾವಣಗೆರೆ.**

## ಕಾಂಗ್ರೆಸ್ ಸೇರಿದ ಜಯಪ್ರಕಾಶ್ ಹೆಗ್ಡೆ

**(1ನೇ ಪುಟದಿಂದ)** ಅವರಿಗೆ ಪಕ್ಷದ ಲಾಂಛನ ನೀಡಿ ಸ್ವಾಗತಿಸಿದರು.

ಹೆಗ್ಡೆ ಅವರ ಜೊತೆಗೆ ಬಿಜೆಪಿಯ ಮಾಜಿ ಶಾಸಕರಾದ ಸುಕುಮಾರ್ ಶೆಟ್ಟಿ ಹಾಗೂ ಹೆಚ್.ಕೆ.ಕುಮಾರಸ್ವಾಮಿ ಸಹಾ ಕಾಂಗ್ರೆಸ್ ಸೇರ್ಪಡೆಗೊಂಡರು.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ನಿವೃತ್ತಿಗೂ ಮುನ್ನ ಇತ್ತಿಚೆಗಷ್ಟೇ ಕಾಂತರಾಜ್ ವರದಿಯನ್ನು ಪರಿಷ್ಕರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

## ನವೀಕರಣ ಫಲಕದ ಉದ್ಘಾಟನೆ

**(1ನೇ ಪುಟದಿಂದ)** ಪ್ರದರ್ಶಿಸುತ್ತಿದೆ ಹಾಗೂ ದೇಶಾದ್ಯಂತ ರೈಲ್ವೆ ನಿಲ್ದಾಣಗಳಲ್ಲಿ 'ಒಂದು ನಿಲ್ದಾಣ ಒಂದು ಉತ್ಪನ್ನ' (ಒಎಸ್‌ಪಿ) ಮಳಿಗೆಗಳನ್ನು ಸ್ಥಾಪಿಸುವ ಮೂಲಕ, ಭಾರತೀಯ ರೈಲ್ವೆ ಪ್ರಧಾನ ಮಂತ್ರಿಯವರ 'ವೋಕಲ್ ಫಾರ್ ಲೋಕಲ್' ಅಭಿಯಾನ ವನ್ನು ಸಕ್ರಿಯವಾಗಿ ಉತ್ತೇಜಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಹರಿಹರ ಶಾಸಕ ಬಿ.ಪಿ.ಹರೀಶ್, ಹರಿಹರ ನಾಗರಿಕ ಸಲಹಾ ಸಮಿತಿ ಸದಸ್ಯರಾದ ಸಾವಿತ್ರಮ್ಮ, ರೈಲ್ವೆ ಅಧಿಕಾರಿಗಳಾದ ಉಮೇಶ್ ನಾಯ್ಕ್, ಮುಖಂಡರಾದ ಯಶವಂತ ಜಾಧವ್, ಗಾಯತ್ರಿ ಸಿದ್ದೇಶ್ವರ, ಯಶೋಧ ವೆಂಕಪ್ಪ, ಪ್ರಶಾಂತ ಕುಮಾರ್, ಜಿ.ಎಸ್.ಶ್ಯಾಮ್ ಇನ್ನಿತರರು ಉಪಸ್ಥಿತರಿದ್ದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ

# ಗೃಹಲಕ್ಷ್ಮಿ

## ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು

# ₹2000


ಕರ್ನಾಟಕ ಸರ್ಕಾರ
ಗೃಹಲಕ್ಷ್ಮಿ ಯೋಜನೆ

ಮಂಜೂರಾತಿ ಪತ್ರ

ಪಡಿತರ ಚೀಟಿ ಸಂಖ್ಯೆ 160300131993 ಹೊಂದಿರುವ ಶ್ರೀಮತಿ ಶಾಂತಮ್ಮ ರವರ ಗೃಹ ಲಕ್ಷ್ಮಿ ಯೋಜನೆಯ ಅರ್ಜಿಯನ್ನು ದಿನಾಂಕ 26/07/2023 ರಂದು ಒಪ್ಪಿ ಮಂಜೂರು ಮಾಡಲಾಗಿದೆ.

ಗೃಹ ಲಕ್ಷ್ಮಿ ಯೋಜನೆಯ ನಗದು ಸೌಲಭ್ಯವನ್ನು ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.

ಇದು ಕಂಪ್ಯೂಟರ್ ರಚಿತ ದಾಖಲೆಯಾಗಿದ್ದು ಸಹಿಯ ಅಗತ್ಯವಿಲ್ಲ. ಈ ದಾಖಲೆಯ ನೈಜತೆಯನ್ನು ಕೆಳಗೆ ನೀಡಿರುವ QR ಕೋಡ್ ಸ್ಕ್ಯಾನ್ ಮಾಡಿ ಪರಿಶೀಲಿಸಬಹುದು

ಮಂಜೂರಾತಿ ಆದೇಶ ಸಂಖ್ಯೆ: GL002S231428843

TRANSLATION

Sanction Letter

The application for Gruhalakshmi scheme, dated 26/07/2023, by Smt. Shanthamma (Ration card number 160300131993) is hereby approved.

The amount sanctioned under Gruhalakshmi scheme will be transferred to the bank account linked to your Adhaar card.

This is computer generated document and does not require signature. The authenticity of this document can be verified by scanning the QR Code below.

Sanction Order Number: GL002S231428843





ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

# 1.33 ಕೋಟಿ ಮಹಿಳೆಯರ ಖಾತೆಗಳಿಗೆ ರೂ. 2000/- ಜಮೆ



**ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ** ಪ್ರಗತಿಪರ ಮತ್ತು ಸುಸ್ಥಿರ ನಾಯಕತ್ವದ ಅಡಿಯಲ್ಲಿ ಕರ್ನಾಟಕ ಸರ್ಕಾರವು ಜಾರಿಗೆ ತಂದಿರುವ ಗೃಹಲಕ್ಷ್ಮಿ ಯೋಜನೆಯಿಂದ ಕರ್ನಾಟಕದ ಮಹಿಳೆಯರು ಸ್ವಾವಲಂಬಿ, ಸ್ವ-ಸಾಮರ್ಥ್ಯ, ಸ್ವಯಂ ಸ್ಥೈರ್ಯ ಮತ್ತು ಸ್ವಯಂ ಗೌರವದಿಂದ ಜೀವನ ಸಾಗಿಸಲು ನೆರವಾಗಿದೆ.

ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ




ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಗೃಹ ಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ರವರಿಗೆ ಸ್ವಾಗತ ನೀಡಿದ ಸಂದರ್ಭ

ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg

ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500

## ನುಡಿದಂತೆ ನಡೆದಿದ್ದೇವೆ...

ಕರ್ನಾಟಕದಲ್ಲಿ **96% ಗೂ ಹೆಚ್ಚಿನ ಜನರು** ಒಂದು ಅಥವಾ ಹೆಚ್ಚು ಗ್ಯಾರಂಟಿ ಯೋಜನೆಗಳ ಅನುಕೂಲವನ್ನು ಪಡೆಯುತ್ತಿರುವರು.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಕುಟುಂಬ ರಾಜಕೀಯ ಮುಕ್ತಗೊಳಿಸಲು ಬಿಜೆಪಿ ಗೆಲ್ಲಿಸೋಣ



> ಭಾನುವಳ್ಳಿ ಗ್ರಾಮದಲ್ಲಿನ ವಾಲ್ಮೀಕಿ ಪುತ್ಥಳಿ ಹಾಗೂ ಮಹಾದ್ವಾರ ತೆರವು ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ. ನಮ್ಮ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ, ಅದೇ ಜಾಗದಲ್ಲೇ ಪುನರ್ ನಿರ್ಮಾಣ ಮಾಡುತ್ತೇನೆ.
> - ಬಂಗಾರು ಹನುಮಂತು.

> ಎಸ್ಸಿ-ಎಸ್ಟಿಗೆ ಮೀಸಲಾಗಿಟ್ಟ 11 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಕಾರ್ಡ್‌ಗಳಿಗೆ ವ್ಯಯಿಸುತ್ತಿದ್ದಾರೆ. ಈ ಗ್ಯಾರಂಟಿ ಕಾರ್ಡ್‌ಗಳಿಂದ ಅಭಿವೃದ್ಧಿ ಅಸಾಧ್ಯ
> - ಸಂಸದ ಜಿ.ಎಂ. ಸಿದ್ದೇಶ್ವರ

ದಾವಣಗೆರೆ, ಮಾ.12- ಹಿಂದಿನ ಬಿಜೆಪಿ ಸರ್ಕಾರ ಪ.ಪಂಗಡಕ್ಕೆ ಶೇ.7ರಷ್ಟು ಮಿಸಲಾತಿ ಕೊಡುವ ಜತೆಗೆ ವಾಲ್ಮೀಕಿ ಸಮಾಜದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದೆ. ಆದ್ದರಿಂದ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ಮೋದಿ ಅವರನ್ನು ಗೆಲ್ಲಿಸಬೇಕು ಎಂದು ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನಮಂತು ತಿಳಿಸಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಪಂಗಡಗಳ ಮುನ್ನಡೆ ಸಮಾವೇಶದಲ್ಲಿ ಅವರು ಮಾತನಾಡಿದರು.

ನಮ್ಮ ಸಮಾಜವು ಮೀಸಲಾತಿ ಪಡೆಯಲು 30ವರ್ಷಗಳ ಕಾಲ ಹೋರಾಟ ನಡೆಸಿತ್ತು. ಆದರೆ ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಶೇ.7ರ ಮಿಸಲಾತಿ ನೀಡಿ ಸಮಾಜದ ಹಿತ ಕಾಪಾಡಿದೆ ಎಂದು ಹೇಳಿದರು.

ಬಿಜೆಪಿಯು ನಮ್ಮದೇ ಪಂಗಡದ ದ್ರೌಪತಿ ಮುರ್ಮು ಅವರಿಗೆ ರಾಷ್ಟ್ರಪತಿ ಸ್ಥಾನ ನೀಡಿದೆ. ಪ. ಪಂಗಡಕ್ಕೆ ಪ್ರತ್ಯೇಕ ಪಟ್ಟಿ, ಸಮುದಾಯ ಭವನ ಸೇರಿದಂತೆ ಅನೇಕ ಸೌಲಭ್ಯವನ್ನು ನಮ್ಮ ಸಮಾಜಕ್ಕೆ ಕಲ್ಪಿಸಿದೆ ಎಂದರು.

ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ್ ಖರ್ಗೆ ನೀಡಿದ್ದ ಹೇಳಿಕೆಯಂತೆ, ಬಿಜೆಪಿಯು 400ಕ್ಕೂ ಅಧಿಕ ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ತಿಳಿಸಿದರು.

ಜಿಲ್ಲೆಯ ಬಿಜೆಪಿಯಲ್ಲಿ ಯಾವುದೇ ಬಣ ರಾಜಕೀಯ ನಡೆಯುತ್ತಿಲ್ಲ ಎಂದು ಸ್ಪಷ್ಟೀಕರಿಸಿದ ಅವರು, ಇಲ್ಲಿನ ಕುಟುಂಬ ರಾಜಕೀಯಕ್ಕೆ ವಿರಾಮ ನೀಡುವ ಮೂಲಕ ಬರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಿ ಎಂದು ಮನವಿ ಮಾಡಿದರು.

ಸಂಸದ ಜಿ.ಎಂ ಸಿದ್ದೇಶ್ವರ ಮಾತನಾಡಿ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿಯೇ ಬಹುದೊಡ್ಡ ಸಮಾಜ ಇದಾಗಿದೆ. ರಾಜರಾದ ಭರಮಪ್ಪ ನಾಯಕರು 80ಕ್ಕೂ ಹೆಚ್ಚು ಕೆರೆ ನಿರ್ಮಿಸಿದ್ದಾರೆ ಎಂದು ಹೇಳಿದರು.

ನಾಯಕ ಸಮಾಜದ ಶೇ.75ರಷ್ಟು ಜನ ನಮ್ಮ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ. ಇದಕ್ಕೆ ಋಣಿಯಾಗಿ ಬಿಜೆಪಿಯೂ ಸಹ ತನ್ನ ಅಧಿಕಾರದಲ್ಲಿ ಎಸ್ಟಿ ನಿಗಮ ಸ್ಥಾಪಿಸಿ, ಸಾಕಷ್ಟು ಅನುದಾನ ಕೊಟ್ಟಿದೆ ಎಂದು ತಿಳಿಸಿದರು.

500 ವರ್ಷದ ಕನಸಾದ ಅಯೋಧ್ಯೆ ರಾಮ ಮಂದಿರ ಲೋಕಾರ್ಪಣೆ ಮಾಡಿದ್ದಾರೆ. ಮತ್ತು ಅಲ್ಲಿನ ವಿಮಾನ ನಿಲ್ದಾಣಕ್ಕೆ ಮಹರ್ಷಿ ವಾಲ್ಮೀಕಿ ಅವರ ಹೆಸರು ಸೂಚಿಸಿ, ಸಮಾಜಕ್ಕೆ ಗೌರವಿಸಿದ್ದಾರೆ ಎಂದರು.

ಕಳೆದ 10 ವರ್ಷಗಳ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡುವ ಜತೆಗೆ ಗಡಿ ಭದ್ರತೆಗೂ ಹೆಚ್ಚಿನ ಗಮನಹರಿಸಿದ್ದಾರೆ. ಆದ್ದರಿಂದ ಮತ್ತೊಮ್ಮೆ ಮೋದಿ ಅವರನ್ನು ಗೆಲ್ಲಿಸುವ ಮೂಲಕ ದೇಶವನ್ನು ರಕ್ಷಿಸೋಣ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಎಸ್ಟಿಗೆ ಮೀಸಲಾಗಿದ್ದ 15 ಕ್ಷೇತ್ರಗಳಲ್ಲಿ ಸೋತಿದ್ದೇವೆ. ಆದ್ದರಿಂದ ಬರುವ ಚುನಾವಣೆಯಲ್ಲಿ ಈ ತಪ್ಪನ್ನು ಸರಿಪಡಿಸಿಕೊಂಡು ಚುನಾವಣಾ ಅಭ್ಯರ್ಥಿಯನ್ನು ಬೆಂಬಲಿಸೋಣ ಎಂದರು.

ವಾಲ್ಮೀಕಿ ಸಮುದಾಯಕ್ಕೆ ಬಿಜೆಪಿಯ ಕೊಡುಗೆಯನ್ನು ಪಿಪಿಟಿಯ ಮೂಲಕ ವಾದಿರಾಜ್ ವಿವರಿಸಿದರು.

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯ್ಕ್, ಮಾಜಿ ಸಚಿವ ಎಸ್.ವಿ ರವೀಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧನಂಜಯ್ ಕಡ್ಲೆಬಾಳ್, ಅನಿಲ್ ಕುಮಾರ್ ನಾಯ್ಕ್, ಮಾಜಿ ಶಾಸಕರಾದ ಎಸ್.ವಿ ರಾಮಚಂದ್ರ, ಮಾಡಾಳ್ ವಿರೂಪಾಕ್ಷಪ್ಪ, ಬಸವರಾಜ್ ನಾಯ್ಕ್, ಮಾಜಿ ವಿ.ಮು.ಸಚೇತಕ ವಿವೇಕ್ ಸ್ವಾಮಿ, ರಾಜ್ಯ ಯುವ ಮೋರ್ಚಾದ ಉಪಾಧ್ಯಕ್ಷ ಶ್ಯಾಮ್, ಕಾರ್ಯಕಾರಿಣಿ ಸದಸ್ಯ ಗುಮ್ಮನೂರು ಶ್ರೀನಿವಾಸ್, ಹನುಮಂತಪ್ಪ, ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾದ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಕಾರ್ಯಕಾರಿಣಿ ಸದಸ್ಯ ದುರ್ಗೇಶ್, ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಲೋಹಿತ್ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಎಂ. ಲೋಕೇಶಪ್ಪ, ರಾಜ್ಯ ಕೋಶಾಧ್ಯಕ್ಷ ಮಣಿಕಂಠ, ಕೆ.ಬಿ. ಕೊಟ್ರೇಶ್, ಮಂಜುನಾಥ್, ನವೀನ್ ಸೇರಿದಂತೆ ಪ್ರಮುಖರು ಇದ್ದರು.

# ಪ್ರಯತ್ನಗಳ ಅವಶ್ಯಕತೆ ಇದೆ

**(1ನೇ ಪುಟದಿಂದ)** ಅಭಿಯಾನದಲ್ಲಿ ನಮ್ಮ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ವಿಜ್ಞಾನಿಗಳು ಹೊಸ ತಂತ್ರಜ್ಞಾನಗಳನ್ನು ಆವಿಷ್ಕರಿಸುವ ಮೂಲಕ ತಮ್ಮ ಸಕ್ರಿಯ ಪಾತ್ರವನ್ನು ವಹಿಸುವ ಅಗತ್ಯವಿದೆ. ಪ್ರಸ್ತುತ ಉತ್ಪಾದನೆ ಮತ್ತು ಉದ್ಯಮಶೀಲತೆಯ ಯುಗವಾಗಿದೆ ಎಂದರು.

ಸ್ವಾಮಿ ವಿವೇಕಾನಂದರ "ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿಯನ್ನು ಸಾಧಿಸುವವರೆಗೆ ನಿಲ್ಲಬೇಡಿ." ಎಂಬ ಸಂದೇಶವನ್ನು ಸ್ಮರಿಸಿದ ರಾಜ್ಯಪಾಲರು, ಈ ಸಂಕಲ್ಪದಿಂದ ನಮ್ಮ ಯುವಕರು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕು. 76 ವರ್ಷಗಳ ಸ್ವಾತಂತ್ರ್ಯದ ನಂತರದ ಪಯಣದಲ್ಲಿ ದೇಶವು ಅನೇಕ ಸವಾಲುಗಳನ್ನು ಎದುರಿಸಿದೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ ಎಂದರು.

### 500 ಕೋಟಿ ರೂ. ವಾಪಾಸ್ ತರಿಸಿಕೊಡಿ

**(1ನೇ ಪುಟದಿಂದ)** ಬರುವುದರಿಂದ ಮುಟ್ಟುಗೋಲು ಹಾಕಿಕೊಂಡ ಹಣವನ್ನು ರಾಜ್ಯಪಾಲರು, ಸಂಸದರು ತಕರಾರನ್ನು ಇತ್ಯರ್ಥ ಮಾಡಿ ವಾಪಾಸ್ ತರಿಸಿ ಕೊಟ್ಟರೆ ಕಾಲೇಜನ್ನು ಮತ್ತಷ್ಟು ಅಭಿವೃದ್ಧಿ ಮಾಡಬಹುದು ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಮಾತನಾಡಿ, ಯುಬಿಡಿಟಿ ಕಾಲೇಜು ಆರಂಭವಾಗಿದ್ದು 1951ರಲ್ಲಿ. ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರು ಉದ್ಘಾಟಿಸಿದ್ದರು. ಇಂದಿಗೆ 75 ವರ್ಷಗಳ ಆಗುತ್ತಾ ಬಂದಿದೆ. ದಾವಣಗೆರೆಯಲ್ಲಿ ಯುಬಿಡಿಟಿ ಕಾಲೇಜು ಕಟ್ಟಲು ದೇವೇಂದ್ರಪ್ಪ, ತವನಪ್ಪ ಕುಟುಂಬ ಅಂದಿನ ಕಾಲದಲ್ಲಿ ರೂ.5 ಲಕ್ಷ ದೇಣಿಗೆ ನೀಡಿದ್ದರು. ಇಂದು ಅತ್ಯುತ್ತಮ ಕಾಲೇಜಾಗಿ ಬೆಳೆದಿದೆ. ಕಾಲೇಜು ಮೊದಲು ಮೈಸೂರು ವಿ.ವಿ. ನಂತರ ಕುವೆಂಪು ವಿವಿ ಹಾಗೂ ದಾವಣಗೆರೆ ವಿವಿ ವ್ಯಾಪ್ತಿಗೆ ಬಂದಿತು. ತಾಂತ್ರಿಕ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಬೇಕೆಂದು ವಿಟಿಯುಗೆ ಸೇರಿಸಲಾಗಿದ್ದು ಇದು ವಿಶ್ವವಿದ್ಯಾನಿಲಯದ ಏಕೈಕ ಕಾಲೇಜು ಆಗಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ ಸಿ ಸುಧಾಕರ್ ಮುಖ್ಯ ಅತಿಥಿಗಳಾಗಿ ಮಾತನಾಡಿ, ದಾವಣಗೆರೆಯಲ್ಲಿ ದಂತ ವೈದ್ಯಕೀಯ ವಿದ್ಯಾರ್ಥಿಯಾಗಿ ಒಂದೂವರೆ ವರ್ಷ ನಡೆದ ಇಲ್ಲಿನ ಘಟನೆಗಳನ್ನು ಸ್ಮರಿಸುತ್ತಾ ಇಂದು ಉನ್ನತ ಶಿಕ್ಷಣ ಸಚಿವನಾಗಿದ್ದೇನೆ ಎಂದು ತನ್ನ ಸಂತೋಷ ವ್ಯಕ್ತಪಡಿಸಿದರು.

ಸಂಸದ ಡಾ. ಜಿ. ಎಂ. ಸಿದ್ದೇಶ್ವರ್, ಹರಿಹರ ಶಾಸಕ ಬಿ.ಪಿ.ಹರೀಶ್ ಉಪಸ್ಥಿತರಿದ್ದರು. ವಿಟಿಯು ಕುಲಪತಿ ಪ್ರೊ. ವಿದ್ಯಾಶಂಕರ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿಡಿಟಿ ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಪಿ. ನಾಗರಾಜಪ್ಪ ವಂದಿಸಿದರು.

# ಭಾಗ್ಯಗಳಿಗೆ ಸೋಲದೇ ಬಿಜೆಪಿ ಗೆಲ್ಲಿಸೋಣ

**(1ನೇ ಪುಟದಿಂದ)** ಸಿದ್ದೇಶ್ವರ ಮಾತನಾಡಿ, ಓಬಿಸಿಯು 15ಕ್ಕೂ ಅಧಿಕ ಜಾತಿಗಳಿಂದ ಕೂಡಿದ ದೊಡ್ಡ ಸಮಾಜವಾಗಿದೆ. ಆದ್ದರಿಂದ ಓಬಿಸಿ ವರ್ಗವರ ಬಳಿ ಬಿಜೆಪಿ ಗೆಲ್ಲಿಸುವ ಶಕ್ತಿ ಇದೆ ಎಂದು ತಿಳಿಸಿದರು.

> ಪ್ರತಿಯೊಬ್ಬ ಕಾರ್ಯಕರ್ತ ಕಟ್ಟಿದ ಪಕ್ಷವೇ ಭಾರತೀಯ ಜನತಾ ಪಾರ್ಟಿ ಆಗಿದೆ. ಆದ್ದರಿಂದ ಚುನಾವಣೆಗೆ ಕಾಂಗ್ರೆಸ್‌ಗೆ ಸೆಡ್ಡು ಹೊಡೆಯುವ ವ್ಯಕ್ತಿಗೆ ಟಿಕೆಟ್ ನೀಡಿ, ಆದರೆ ಕಾಂಗ್ರೆಸ್ ಜತೆ ಹೊಂದಿಕೊಳ್ಳುವವರಿಗೆ ಟಿಕೆಟ್ ಸೂಚಿಸಬೇಡಿ.
> - ಯಶವಂತರಾವ್ ಜಾಧವ್, ಮಾಜಿ ಜಿಲ್ಲಾಧ್ಯಕ್ಷ

10 ವರ್ಷಗಳಲ್ಲಿ ಪ್ರಧಾನಿ ಮೋದಿ ಅವರು ವಿಶ್ವಕ್ಕೆ ಮಾದರಿಯಾಗುವಂತೆ ಕೆಲಸ ಮಾಡಿದ್ದಾರೆ. ಆದ್ದರಿಂದ ಮತ್ತೊಮ್ಮೆ ಮೋದಿ ಅವರನ್ನು ಗೆಲ್ಲಿಸಬೇಕು ಎಂದರು.

ರಾಜ್ಯ ಓಬಿಸಿ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಮೋದಿ ಅವರನ್ನು ಸೋಲಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಕುತಂತ್ರ ನಡೆದಿದೆ. ಇದ್ಯಾವುದಕ್ಕೂ ಬಗ್ಗದೇ ನಾವುಗಳು ಬಿಜೆಪಿಗೆ ಶಕ್ತಿಯಾಗೋಣ ಎಂದರು.

ಮಾಜಿ ಸಚಿವ, ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ರಾಜ್ಯ ಓಬಿಸಿ ಉಪಾಧ್ಯಕ್ಷ ಕುಬೇಂದ್ರಪ್ಪ, ಕಾರ್ಯದರ್ಶಿ ರಘುನಂದನ್ ಅಂಬರ್‌ಕರ್, ಲೋಕಸಭಾ ಓಬಿಸಿ ಪ್ರಭಾರಿ ಬೇತೂರು ಬಸವರಾಜ್, ಸತೀಶ್ ಕೊಳೇನಹಳ್ಳಿ, ಮಾಜಿ ಮೇಯರ್ ಗುರುನಾಥ್, ಪಾಲಿಕೆ ಸದಸ್ಯ ಸುರೇಶ್ ಗಂಡುಗಾಳೆ, ರೇಣುಕಾ ಶ್ರೀನಿವಾಸ್, ಯುವ ಮುಖಂಡ ಶ್ಯಾಮ್, ವೈ. ಮಲ್ಲೇಶ್ ಪ್ರಮುಖರು ಇದ್ದರು.

# 28 ಕ್ಷೇತ್ರ ಗೆಲ್ಲಲು ಬಿಜೆಪಿ ಒಬಿಸಿ ಮೋರ್ಚಾದಿಂದ ಹಲವು ಕಾರ್ಯಕ್ರಮ

ದಾವಣಗೆರೆ, ಮಾ.11- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 28 ಕ್ಷೇತ್ರಗಳನ್ನೂ ಗೆಲ್ಲಬೇಕೆಂಬ ಸಂಕಲ್ಪ ತೊಟ್ಟಿದ್ದಾರೆ. ಅವರ ಗುರಿ ಈಡೇರಿಸಲು ಬಿಜೆಪಿ ಒಬಿಸಿ ಮೋರ್ಚಾ ಅವರೊಂದಿಗೆ ನಿಲ್ಲಲಿದೆ ಎಂದು ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವುದರ ಜೊತೆಗೆ ಮತಗಳ ಅಂತರವನ್ನೂ ಹೆಚ್ಚಿಸುವ ನಿಟ್ಟಿನಲ್ಲಿ ಹಿಂದುಳಿದ ವರ್ಗ ದೊಡ್ಡ ಪಾತ್ರ ನಿರ್ವಹಿಸಲಿದೆ ಎಂದರು.

ಕಾಂಗ್ರೆಸ್ ದೇಶ ವಿದ್ರೋಹಿ ಶಕ್ತಿಗಳನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡಿದೆ. ಇದಕ್ಕೆ ಇತ್ತೀಚೆಗೆ ವಿಧಾನಸಭಾ ಆವರಣದಲ್ಲಿಯೇ ಶತ್ರು ದೇಶದ ಪರ ಘೋಷಣೆ ಕೂಗಿದ ಘಟನೆಯೇ ಸಾಕ್ಷಿ ಎಂದರು.

ಹಿಂದುಳಿದ ವರ್ಗಗಳಲ್ಲಿನ ಬಹುತೇಕ ಜಾತಿಗಳು ರಾಜಕೀಯ, ಔದ್ಯೋಗಿಕ ಬದುಕು ಕಟ್ಟಿಕೊಳ್ಳಲು ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಒಬಿಸಿ ಮೋರ್ಚಾದಿಂದ ಬೂತ್, ವಾರ್ಡ್ ಹಾಗೂ ಶಕ್ತಿವಾರು ಮಟ್ಟದಲ್ಲಿ ಎಲ್ಲಾ ಸಮುದಾಯಗಳನ್ನು ನೇರವಾಗಿ ಸಂಪರ್ಕ ಮಾಡಲಾಗುತ್ತದೆ ಎಂದರು. ಸ್ವಾಭಿಮಾನಿ ಭಾರತದ ಕಲ್ಪನೆ, ಮೇಕ್ ಇನ್ ಇಂಡಿಯಾ ಹಾಗೂ ವಿಶ್ವಕರ್ಮ ಯೋಜನೆ ಎಲ್ಲವೂ ಬದುಕುಗೆ ನೆರವಾಗುವ ಯೋಜನೆಗಳಾಗಿವೆ. ಇದನ್ನು ಜನರಿಗೆ ಮನವರಿಕೆ ಮಾಡಿಕೊಡಲಿದ್ದೇವೆ, ಈ ಬಾರಿ ಹಿಂದುಳಿದ ಸಮುದಾಯಗಳು ಮೋದಿ ಅವರನ್ನು ಬೆಂಬಲಿಸಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೋದಿ ಸರ್ಕಾರದ ಯಾವುದೇ ಯೋಜನೆಗಳ ಕಾಯಕ ಸಮಾಜ, ಶ್ರಮಿಕ ವರ್ಗ ಕೇಂದ್ರೀಕರಿಸಿಯೇ ಇರುತ್ತವೆ. ಬಸವಣ್ಣನ ನಂತರ ಕಾಯಕ ಸಮಾಜಕ್ಕೆ ಪ್ರಾತಿನಿಧ್ಯ ನೀಡಿದ ವ್ಯಕ್ತಿ ಮೋದಿ ಮಾತ್ರ ಎಂದರು.

ಬಿಜೆಪಿ ಕಾರ್ಯಕರ್ತರು ಮತ್ತೊಮ್ಮೆ ಮೋದಿ ಎಂಬ ಘೋಷಣೆಯೊಂದಿಗೆ ಸೇನಾನಿಯಂತೆ ತಮ್ಮನ್ನು ಸಮರ್ಪಣೆ ಮಾಡಿಕೊಳ್ಳುವಲ್ಲಿ ಕಾರ್ಯೋನ್ಮುಖರಾಗಿದ್ದಾರೆ. 28 ಕ್ಷೇತ್ರಗಳನ್ನು ಗೆಲ್ಲಲು ಒಬಿಸಿ ಮೋರ್ಚಾದಿಂದ ರಾಜ್ಯಾದ್ಯಂತ ವಿವಿಧ ಸಮುದಾಯಗಳನ್ನೊಳಗೊಂಡಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರುಗಳಾದ ರಾಜನಹಳ್ಳಿ ಶಿವಕುಮಾರ್, ಸತೀಶ್ ಬಿ.ಎಂ. ಕೊಳೇನಹಳ್ಳಿ, ಗುರುನಾಥ್, ಸೋಮಶೇಖರ್, ಸತೀಶ್ ಸೇಜವಾಡಕರ್, ಕುಬೇಂದ್ರಪ್ಪ, ರಘು ಅಂಬರ್‌ಕರ್, ಮಂಜುನಾಥ್ ಮಡಿವಾಳ, ವಿಶ್ವಾಸ್ ಇತರರಿದ್ದರು.

# ದೇಶ ಮತ್ತೆ 'ಚಿನ್ನದ ಹಕ್ಕಿ'ಯಾಗಲಿ

**(1ನೇ ಪುಟದಿಂದ)** ಒಂದೇ ವೇಳಾಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಶೈಕ್ಷಣಿಕ ಚಟುವಟಿಕೆಗಳು ಏಕಕಾಲದಲ್ಲಿ ಮುಕ್ತಾಯವಾಗುವುದರಿಂದ ವಿದ್ಯಾರ್ಥಿಗಳಲ್ಲಿ ಪ್ರವೇಶ ಪಡೆಯಲು ಅನುಕೂಲವಾಗುತ್ತದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ದಾವಣಗೆರೆ ವಿ.ವಿ. ಕುಲಪತಿಗಳಾದ ಪ್ರೊ.ಬಿ.ಡಿ.ಕುಂಬಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪದಕ ಹಾಗೂ ಪದವಿ ಪ್ರಮಾಣ ಪತ್ರ ನೀಡಲಾಯಿತು. 64 ಸಂಶೋಧಕರಿಗೆ ಪಿ.ಹೆಚ್.ಡಿ. ಪ್ರದಾನ ಮಾಡಲಾಯಿತು.

ವೇದಿಕೆಯ ಮೇಲೆ ಇಸ್ರೋ ಮಾಜಿ ಮುಖ್ಯಸ್ಥ ಎ.ಎಸ್. ಕಿರಣ್ ಕುಮಾರ್, ಕುಲಸಚಿವ ಪ್ರೊ.ವೆಂಕಟರಾವ್ ಎಂ. ಪಲಾಟೆ, ಪರೀಕ್ಷಾಂಗ ಕುಲಸಚಿವ ಪ್ರೊ. ಸಿ.ಕೆ.ರಮೇಶ್ ವಿವಿಧ ನಿಕಾಯಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

### ನಿರಂತರ ಕಲಿಕೆಯೇ ಬೆಳವಣಿಗೆ ಮಾರ್ಗ

**(1ನೇ ಪುಟದಿಂದ)** ಕಾಲಘಟ್ಟದಲ್ಲಿ ಕಲಿತಿದ್ದು ಹೆಚ್ಚು ಕಾಲ ಉಪಯುಕ್ತವಾಗಿರುತ್ತಿತ್ತು. ವೇಗವಾಗಿ ತಂತ್ರಜ್ಞಾನ ಬೆಳೆಯುವ ಕಾಲದಲ್ಲಿ ಕೇವಲ ಪದವಿ ಕಲಿಕೆಯನ್ನು ಅವಲಂಬಿಸಲಾಗದು ಎಂದರು.

2035ರಲ್ಲಿ ಭೂ ಕಕ್ಷೆಯಲ್ಲಿ ಬಾಹ್ಯಾಕಾಶ ಕೇಂದ್ರ ಸ್ಥಾಪಿಸುವ ಹಾಗೂ 2040ರಲ್ಲಿ ಚಂದ್ರನ ಮೇಲೆ ಭಾರತೀಯ ಕಾಲಿಡುವ ಗುರಿ ಇದೆ. ಈ ಗುರಿಗಳ ಕಾರಣದಿಂದ ಮುಂದಿನ ವರ್ಷಗಳಲ್ಲಿ ಹಲವಾರು ವಲಯಗಳಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಗೆ ಅಪಾರ ಅವಕಾಶಗಳು ದೊರೆಯಲಿವೆ ಎಂದು ಕಿರಣ್ ಕುಮಾರ್ ಹೇಳಿದರು.

# ಶ್ರೀ ಗುರುರಾಜರ ಶೋಭಾಯಾತ್ರೆ

**(1ನೇ ಪುಟದಿಂದ)** ಭವನದ ವರೆಗೆ ಸಾಗಿತು. ಮಾರ್ಗದುದ್ದಕ್ಕೂ ಮಂತ್ರಾಲಯ ಪ್ರಭುಗಳ ಸ್ಮರಣೆ ಮಾಡಲಾಯಿತು.

ವೇದ ಘೋಷಗಳು ಮೊಳಗಿದವು. ಚಂಡೆ, ನಾದಸ್ವರ ವಾದನ, ವಿವಿಧ ಭಜನಾ ಮಂಡಳಿಗಳ ಸದಸ್ಯರು ದಾಸರ ಕೀರ್ತನೆಗಳನ್ನು ಹಾಡಿದ್ದು ಮೆರವಣಿಗೆಯ ಕಳೆಯನ್ನು ಹೆಚ್ಚಿಸಿತು. ರಸ್ತೆಯ ಇಕ್ಕೆಲಗಳಲ್ಲಿದ್ದ ಸಾರ್ವಜನಿಕರು ರಾಯರ ವೃಂದಾವನದ ದರ್ಶನ ಪಡೆದರು.

ಮಂತ್ರಾಲಯ ಶ್ರೀ ಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್‌ನ ನಿರ್ದೇಶಕ ಕೆ. ಅಪ್ಪಣ್ಣಾಚಾರ್ಯರು, ಮಂತ್ರಾಲಯದ ಶ್ರೀ ರಾಘವೇಂದ್ರ ಸಪ್ತಾಹ ಕಾರ್ಯಾಚರಣ ಸಮಿತಿ ಅಧ್ಯಕ್ಷ, ಅರ್ಚಕ ಪರಿಮಳಾಚಾರ್ಯರು, ಬ್ರಹ್ಮಣ್ಯಾಚಾರ್, ಮಹೋತ್ಸವ ಸಮಿತಿಯ ಕಾರ್ಯದರ್ಶಿ ಕಂಪ್ಲಿ ಗುರುರಾಜಾಚಾರ್, ಸತ್ಯಬೋಧ ಕುಲಕರ್ಣಿ, ಡಾ.ಎಂ.ಸಿ. ಶಶಿಕಾಂತ್, ಡಾ.ಸಿ.ಕೆ. ಆನಂದ ತೀರ್ಥಾಚಾರ್, ಕೆ. ವಿಠ್ಠಲ್ ಇದ್ದರು.

ಪಿ.ಎಸ್. ಸತ್ಯನಾರಾಯಣ ರಾವ್, ಪ್ರಾಣೇಶಾಚಾರ್, ಗೋಪಾಲಾಚಾರ್, ಶೇಷ ನವರತ್ನ, ಬದರಿನಾರಾಯಣ, ವಾಚಸ್ಪತಿ, ಪಿ.ಕೆ. ಪ್ರಕಾಶ್, ಪಲ್ಲಕ್ಕಿ ವಾಸುದೇವಾಚಾರ್, ರಮೇಶ ಜಹಗೀರದಾರ್, ಅನಿಲ್ ಬಾರೆಂಗಳ್, ಎಂ.ಜಿ. ಶ್ರೀಕಾಂತ್, ಮಾಧವ ಪದಕಿ ಭಾಗವಹಿಸಿದ್ದರು.

# ಓ.ಬಿ.ಸಿ. ಸಮುದಾಯದ ಸೈನಿ ಹರಿಯಾಣ ಸಿಎಂ

**(1ನೇ ಪುಟದಿಂದ)** ತಿಂಗಳಲ್ಲಿ ಸೈನಿ ಅವರನ್ನು ಹರಿಯಾಣ ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.

ಇದಕ್ಕೂ ಮುಂಚೆ ಕಟ್ಟರ್ ಅವರು ತಮ್ಮ ಎಲ್ಲಾ ಸಂಪುಟ ಸಚಿವರೊಂದಿಗೆ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದರು.

ಮುಂಬರುವ ಲೋಕಸಭಾ ಚುನಾವಣೆ ವೇಳೆಗೆ ಓ.ಬಿ.ಸಿ. ಹಾಗೂ ಜಾಟೇತರ ಮತಗಳನ್ನು ಗಟ್ಟಿಗೊಳಿಸಲು ಬಿಜೆಪಿ ಈ ಕ್ರಮ ತೆಗೆದುಕೊಂಡಿದೆ ಎನ್ನಲಾಗುತ್ತಿದೆ.

ಜಾಟ್ ಸಮುದಾಯದ ಬಹುತೇಕರು ಕಾಂಗ್ರೆಸ್, ಜನನಾಯಕ ಜನತಾ ಪಾರ್ಟಿ ಹಾಗೂ ಇಂಡಿಯನ್ ನ್ಯಾಷನಲ್ ಲೋಕ್ ದಳ್ ನಡುವೆ ವಿಭಜನೆಯಾಗಿದ್ದಾರೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗುತ್ತಿದೆ.

# ಭಾನುವಳ್ಳಿಯಲ್ಲಿ ತೆರವಾಗಿರುವ ಮದಕರಿ ನಾಯಕ ಮಹಾದ್ವಾರ, ನಾಮಫಲಕ ಪುನರ್ ನಿರ್ಮಿಸದಿದ್ದರೆ ಪ್ರತಿಭಟನೆ

ದಾವಣಗೆರೆ, ಮಾ.12- ಹರಿಹರ ತಾಲೂಕಿನ ಭಾನುವಳ್ಳಿಯಲ್ಲಿ ತೆರವುಗೊಳಿಸಿರುವ ರಾಜ ವೀರಮದಕರಿ ನಾಯಕ ಮಹಾದ್ವಾರ ಹಾಗೂ ವಾಲ್ಮೀಕಿ ವೃತ್ತ ನಾಮಫಲಕವನ್ನು ಮೂರ್ನಾಲ್ಕು ದಿನಗಳಲ್ಲಿ ಪುನರ್ ನಿರ್ಮಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಆದಾಗ್ಯೂ ಕ್ರಮ ಕೈಗೊಳ್ಳಲಿದ್ದರೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ನಿವಾಸದ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಯುವ ವಾಲ್ಮೀಕಿ ವೇದಿಕೆ ರಾಜ್ಯಾಧ್ಯಕ್ಷ ಪಿ.ಆರ್. ತುಳಸಿರಾಮ್ ಎಚ್ಚರಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸತ್ಯಶೋಧನಾ ಸಮಿತಿ ವರದಿ ಆಧಾರದಲ್ಲಿ ಅನಕೃತವಾಗಿ ಅಳವಡಿಸಿದ್ದ ನಾಮಫಲಕ ತೆರವುಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ಅದೇ ವೃತ್ತದ ಅಭಿವೃದ್ಧಿಗೆ ಸರ್ಕಾರದಿಂದಲೇ ಅನುದಾನ ಮಂಜೂರಾಗಿದೆ. ಈ ಬಗೆಗಿನ ದಾಖಲೆಗಳೂ ಇವೆ ಎಂದರು.

ಭಾನುವಳ್ಳಿಯಲ್ಲಿ 1999ರಲ್ಲಿ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಅನುದಾನದಲ್ಲಿ ನಿರ್ಮಿಸಿದ್ದ ರಾಜ ವೀರಮದಕರಿ ನಾಯಕ ಮಹಾದ್ವಾರವನ್ನು, ಅಂದಿನ ಸಹಕಾರ ಸಚಿವ ಎಚ್. ಶಿವಪ್ಪ ಉದ್ಘಾಟಿಸಿದ್ದರು. ಅಲ್ಲದೆ, ಆ ಜಾಗದಲ್ಲಿರುವ ಮಹರ್ಷಿ ವಾಲ್ಮೀಕಿ ವೃತ್ತದ ಅಭಿವೃದ್ಧಿಗೆ 2021ರಲ್ಲಿ 92 ಸಾವಿರ ರೂ. ಹಾಗೂ ಟಿಎಸ್‌ಪಿ ಯೋಜನೆಯಡಿ 1.30 ಲಕ್ಷ ರೂ. ಅನುದಾನ ನೀಡಲಾಗಿದೆ.

ವಾಸ್ತವ ಸ್ಥಿತಿ ಹೀಗಿದ್ದರೂ ಜಿಲ್ಲಾಡಳಿತ ಮಹಾದ್ವಾರ ಮತ್ತು ನಾಮಫಲಕ ತೆರವುಗೊಳಿಸಿರುವುದು ಖಂಡನೀಯ ಎಂದು ಕಿಡಿಕಾರಿದರು.

ಈ ಮಹಾದ್ವಾರ ಮತ್ತು ನಾಮಫಲಕ ತೆರವುಗೊಳಿಸಿರುವುದರ ಹಿಂದೆ, ಮುಖ್ಯಮಂತ್ರಿ ಸಿದ್ದರಾಮಯ್ಯರ ಕೈವಾಡವಿದೆ. ಚುನಾವಣೆಯಲ್ಲಿ ಅಹಿಂದ ಜಪ ಮಾಡಿದ ಸಿದ್ದರಾಮಯ್ಯ, ಗೆದ್ದ ಬಳಿಕ ತಮ್ಮ ಸ್ವಜಾತಿಯವರನ್ನು ಮೆಚ್ಚಿಸಲು ಬೇರೆ ಜಾತಿಗಳ ಮೇಲೆ ದಬ್ಬಾಳಿಕೆ ನಡೆಸಲು ಕುಮ್ಮಕ್ಕು ನೀಡುತ್ತಿರುವುದು ಸರಿಯಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರಾದ ಜಿಗಳಿ ರಂಗಪ್ಪ, ಮಲ್ಲಾಪುರ ದೇವರಾಜ, ಧನ್ಯಕುಮಾರ್, ಬೇವಿನಹಳ್ಳಿ ಮಹೇಶ್, ಕೆ.ಸಿ. ನಾಗರಾಜ, ಚನ್ನಬಸಪ್ಪ, ರಂಗನಾಥ ನಾಯಕ್. ಎಂ.ನಿಜಲಿಂಗಪ್ಪ ಮತ್ತಿತರರಿದ್ದರು.


**ಸೈಟ್ ಮಾರಾಟಕ್ಕಿದೆ**
ಶಾಮನೂರು ರೋಡ್ (3000 Sqft) ದೇವರಾಜ್ ಅರಸ್ 'ಎ' ಬ್ಲಾಕ್‌ನಲ್ಲಿ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ (33x40) ವಿವೇಕಾನಂದ ಬಡಾವಣೆ 30x48 ಸೈಟ್ ಸಿದ್ದವೀರಪ್ಪ, ಆಂಜನೇಯ 30x40 ಸೈಟ್, ಮನೆ. ಡಾಲರ್ಸ್ ಕಾಲೋನಿ 30x40, 30x50, ಸೈಟ್, ಮನೆ. SS 'B' ಬ್ಲಾಕ್- 30x50 ಮನೆ.
76765 58585 ವೀರೇಶ್ ಟಿ.ಎಂ.

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
ಸಬ್‌ರಿಜಿಸ್ಟರ್ ಆಫೀಸ್‌ನಲ್ಲಿ ಪತ್ರ ಬರಹಗಾರರಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನುರಿತ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಸಂಪರ್ಕಿಸಿ.
ಮೊ : 98440 65710

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಬಾಡಿಗೆಗೆ ಲಭ್ಯವಿದೆ**
30x80 ಚದರ ಅಡಿ ವಿಸ್ತಾರವುಳ್ಳ ಬೇಸಮೆಂಟ್ (ಸೆಲ್ಲರ್) ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್ ಬಿಲ್ಡಿಂಗ್ ಬಾಡಿಗೆಗೆ ಲಭ್ಯವಿದೆ. ಶಾಲಾ ಕಾಲೇಜು, ಆಫೀಸ್, ಆಸ್ಪತ್ರೆ, ಹಾಸ್ಟೆಲ್, ಪಿಜಿಗಳನ್ನು ನಡೆಸಲು ಅನುಕೂಲವಿದೆ. ಆಸಕ್ತರು ಸಂಪರ್ಕಿಸಿ. ಡೋರ್ ನಂ. 1852/A3 18ನೇ ಮುಖ್ಯ ರಸ್ತೆ, ಕುವೆಂಪು ನಗರ, ಶಂಕರಲೀಲಾ ಕಲ್ಯಾಣ ಮಂಟಪ ಹತ್ತಿರ, ದಾವಣಗೆರೆ
ಮೊ : 99802 89682

**ಮನೆಗಳು ಬಾಡಿಗೆಗಿದೆ**
2 BHK, 3 BHK 1ನೇ ಮಹಡಿ, # 3999/6-SS ಲೇಔಟ್, ಬಿ ಬ್ಲಾಕ್, 6ನೇ ಕ್ರಾಸ್ 4ನೇ ಮೇನ್, ದಾವಣಗೆರೆ.
99024 94491

**ಮನೆಯ ರೀ ಪೇಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಹೊಸದ ರೀತಿಯಾಗಿ ನಿಮ್ಮ ಇಚ್ಚೆಗೆ ಅನುಗುಣವಾಗಿ ಉತ್ತಮವಾದ ಪೇಂಟ್ ಮಾಡಿ ಕೊಡಲಾಗುವುದು. ದರ ಕಡಿಮೆ ಉತ್ತಮ ಕೆಲಸಕ್ಕಾಗಿ ಸಂಪರ್ಕಿಸಿ :
72046 33302

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
98457 75768
88846 75884

**ಬೇಕಾಗಿದ್ದಾರೆ**
ಎಂ.ಸಿ.ಸಿ. 'ಬಿ' ಬ್ಲಾಕ್‌ನ ಹೋಟೆಲ್‌ಗೆ South Indian ಅಡುಗೆ ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
70198 12207

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಸೈಟುಗಳು ಮಾರಾಟಕ್ಕಿವೆ**
ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 28x60 East, ವಿನಾಯಕ ಬಡಾವಣೆಯಲ್ಲಿ 40x60 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ನಾಟಿ ಕೋಳಿ ಹಾಗೂ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**ಷೇರು ಬಾಂಡ್ ಕಳೆದಿದೆ**
ಕೆ. ಶೇಖರಪ್ಪ, ಕೂಲಂಬಿ, ಹೊನ್ನಾಳಿ ತಾಲ್ಲೂಕು, ಆದ ನಾನು, ನನ್ನ ಹೆಸರಿನಲ್ಲಿ ದಾವಣಗೆರೆ ಷುಗರ್ ಕಂಪನಿಯಲ್ಲಿರುವ ಡಿ.ಎಸ್.ಎಸ್. 1695 ಸಂಖ್ಯೆಯ ಷೇರು ಬಾಂಡ್ 24.02.2024 ರಿಂದ ಕಳೆದಿದೆ. ಸಿಕ್ಕವರು ಈ ಕೆಳಗಿನ ಫೋನ್ ನಂಬರ್ ಗೆ ತಿಳಿಸಿ ಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಈ ಸಂಬಂಧ ಹೊನ್ನಾಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಿಸಲಾಗಿದೆ.
ಮೊ : 97430 23474

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಕ್ಲೀನರ್ (ಪಾತ್ರೆ ತೊಳೆಯಲು) ಬೇಕಾಗಿದ್ದಾರೆ. ಸ್ಥಳ - ಜಯನಗರ 'ಬಿ' ಬ್ಲಾಕ್. ಸಂಪರ್ಕಿಸಿ :
97420 97140

**ಬೇಕಾಗಿದ್ದಾರೆ**
ನ್ಯೂರೋಥೆರಪಿ ಕ್ಲಿನಿಕ್‌ನಲ್ಲಿ ಪಿಯುಸಿ ಪಾಸಾದವರು ಸಹಾಯಕರಾಗಿ ಬೇಕಾಗಿದ್ದಾರೆ. ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಕೆಲಸ ಮಾಡಲು ಅವಕಾಶ ಆಕರ್ಷಕ ಸಂಬಳ, ತಕ್ಷಣ ಸಂಪರ್ಕಿಸಿ :
99726 00713

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ACCOUNTANT REQUIRED**
Company : **Shiva Stone Crusher,** Davangere
Experience : 5-10 years
Salary - 25 k - 40 k /Month
99001 70975
97430 13305

**ಕೆಲಸಕ್ಕೆ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು (Petrol & Diesel) ಹಾಕಲು ಪುರುಷರು ಮತ್ತು ಮಹಿಳೆಯರು ಅನುಭವವುಳ್ಳವರು ಮತ್ತು ಹೊಸದಾಗಿ ಕಲಿಯುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 94821 09492

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**HOUSE FOR LEASE**
2 BHK, Ground floor with Interiors, Corporation & Bore water supply, Vidyanagara Behind. Nutan college
99028 78035

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಸರಸ್ವತಿ ನಗರದಲ್ಲಿ 30x45 ಅಳತೆಯಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿರುವ ಮೂರು ಬೆಡ್ ರೂಮ್‌ನ ಡ್ಯೂಪ್ಲೆಕ್ಸ್ ಮನೆ ಹಾಗೂ ಇದಕ್ಕೆ ಹೊಂದಿಕೊಂಡಂತೆ ಸಿಂಗಲ್ ಬೆಡ್ ರೂಮ್ ಮನೆ ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
99454 92913

**ಬೇಕಾಗಿದ್ದಾರೆ**
ಖಾನಾವಳಿಯಲ್ಲಿ ಪಾರ್ಟ್ ಟೈಂ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಮಯ : ಸಂಜೆ 5.30 ರಿಂದ 10.30
ಮೊ : 99012 36631

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**LADY TEACHERS WANTED**
NTC - 4 Posts, Any Degree - 2 Posts, Attender - 2 Posts.
Contact : **Vidya Vikas Convent** Behind Aaraike Hospital, Davanagere.
99647 51130

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**NEET/KCET CRASH COURSE**
FROM-19.03.2024
ಸಮೃದ್ಧಿ ಅಕಾಡೆಮಿ ದಾವಣಗೆರೆ.
96202 62361
81472 62361

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**WANTED / ಬೇಕಾಗಿದ್ದಾರೆ**
Tellecallers / ಟೆಲಿಕಾಲರ್ಸ್ ಯುವತಿಯರು, ವಿದ್ಯಾಭ್ಯಾಸ : 12th PUC / Degree. ಸಂಪರ್ಕಿಸಿ :
81052 25411
91132 47065, 98443 76666
ಭಾಷೆ : ಕನ್ನಡ, ಇಂಗ್ಲಿಷ್

**Bruit Academy**
IIT FOUNDATION (JEE)
FROM 5th Std to 10th Std
( CBSE, ICSE, IGCSE)
NIJALINGAPPA BADAVANE
96201 53806

**ತಕ್ಷಣ ಬೇಕಾಗಿದ್ದಾರೆ**
MNC ಕಂಪನಿಗಳಿಗೆ 7th, SSLC, PUC, ITI, Degree, Diploma ಆದವರು ನೇರ ನೇಮಕಾತಿಯಿದೆ. ಸಂಬಳ - 18000/- ರಿಂದ 60000/- ವಸತಿ-ಊಟವಿದೆ. ಸಂಪರ್ಕಿಸಿ :
93531 85367

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
81056 99985
89715 04492

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಚೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

# ಕೆರೆ ಒತ್ತುವರಿ ಸ್ವಯಂ ಪ್ರೇರಿತ ತೆರವು: ಶಾಸಕ ಬಿ. ದೇವೇಂದ್ರಪ್ಪ ಶ್ಲಾಘನೆ



ಜಗಳೂರು, ಮಾ. 12 - ಸ್ವಗ್ರಾಮದಲ್ಲಿ ಕೆರೆಯಲ್ಲಿ ಒತ್ತುವರಿ ಮಾಡಿಕೊಂಡಿದ್ದ ರೈತರು ಸ್ವಯಂ ಪ್ರೇರಿತವಾಗಿ ಬಿಟ್ಟುಕೊಡುವ ಮೂಲಕ ಸಹಕರಿಸಿದ್ದಾರೆ. ಇದರ ಫಲವಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದವರು ಗೋಕಟ್ಟೆಯನ್ನು ಸುಂದರ ವಿನ್ಯಾಸದ ಕೆರೆ ನಿರ್ಮಾಣ ಮಾಡಿರುವುದು ಶ್ಲಾಘನೀಯ ಕಾರ್ಯ ಎಂದು ಶಾಸಕ ಬಿ. ದೇವೇಂದ್ರಪ್ಪ ಹೇಳಿದರು.

ತಾಲ್ಲೂಕಿನ ಚಿಕ್ಕಮ್ಮನಹಟ್ಟಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆವತಿಯಿಂದ 'ನಮ್ಮ ಊರು ನಮ್ಮ ಕೆರೆ' ಯೋಜನೆಯಡಿ ಅಭಿವೃದ್ಧಿಗೊಳಿಸಿದ ಕೆರೆ ಹಸ್ತಾಂತರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

3.5 ಕೋಟಿ ವೆಚ್ಚದಲ್ಲಿ ಕೆರೆ ತಡೆಗೋಡೆ ಅಭಿವೃದ್ದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಮೊದಲ ಕಂತಿನಲ್ಲಿ 1.5 ಕೋಟಿ ಬಿಡುಗಡೆಯಾಗಿದೆ.ಶೀಘ್ರ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಹೇಳಿದರು.

**ಚಿಕ್ಕಮ್ಮಹಟ್ಟಿ ಕೆರೆಗೂ ನೀರು ಭರ್ತಿ :**

ಗಡಿಮಾಕುಂಟೆ ಕೆರೆಗೆ 57 ಕೆರೆ ತುಂಬಿಸುವ ಯೋಜನೆಯಡಿ ಪೈಪ್ ಲೈನ್ ಪಕ್ಕದಲ್ಲಿ ಹಾದು ಹೋಗಿದ್ದು. ಗುತ್ತಿಗೆದಾರರಿಗೆ ಹಾಗೂ ಅಧಿಕಾರಿಗಳಿಗೆ ಮನವೊಲಿಸಿ ಪೈಪ್ ಮೂಲಕ ಚಿಕ್ಕಮ್ಮನಹಟ್ಟಿ ಕೆರೆಗೆ ನೀರು ಹರಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮದ ಪವಾಡ ಪುರುಷ ಪೂಜಾ ರಜ್ಜನ ನಾಮದಡಿ ದ್ವಾರ ಬಾಗಿಲು ನಿರ್ಮಿಸಲಾಗುವುದು. ಶಾಲೆ, ಪಶು ಆಸ್ಪತ್ರೆ ಕಟ್ಟಡ ಸೇರಿದಂತೆ, ಮೂಲ ಸೌಕರ್ಯಕ್ಕೆ ಒತ್ತು ನೀಡಲಾಗುವುದು.

ಮಳೆಗಾಲದಲ್ಲಿ ಗ್ರಾಮದ ಹೊರ ಹೊಲಯದ ಕಲ್ಲಂಜಿಕಟ್ಟೆಯಿಂದ ಹರಿದು ಪೋಲಾಗುತ್ತಿದ್ದ ನೀರನ್ನು ಸಂಗ್ರಹಿಸಿ ಜಗಳೂರು ಕೆರೆಗೆ ಸರಾಗವಾಗಿ ಹರಿಸಲು ಕ್ರಮಕೈಗೊಳ್ಳಲಾಗುವುದು ಎಂದು ಶಾಸಕರು ತಿಳಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಜಿಲ್ಲಾ ನಿರ್ದೇಶಕ ಡಾ. ಜನಾರ್ಧನ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಡಿ , ನಮ್ಮೂರು ನಮ್ಮ ಕೆರೆ ಯೋಜನೆಯಡಿ 5 ಕೆರೆಗಳನ್ನು ಅಭಿವೃದ್ದಿಗೆ ಆಯ್ಕೆಮಾಡಲಾಗಿದೆ. ಅದರಲ್ಲಿ ಚಿಕ್ಕಮ್ಮನಹಟ್ಟಿ ಕೆರೆಯನ್ನು 12.30 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಲಕ್ಷ್ಮಮ್ಮ ಮಾರಪ್ಪ, ಉಪಾಧ್ಯಕ್ಷೆ ಸುಧಾಮಣಿ ಕಾಟಪ್ಪ, ಸದಸ್ಯರಾದ ಕೆಂಗಮ್ಮ ಓ. ಮಂಜಣ್ಣ, ಬೊಮ್ಮಕ್ಕ, ಪ್ರಾದೇಶಿಕ ನಿರ್ದೇಶಕಿ ಗೀತಮ್ಮ, ಜ್ಞಾನವಿಕಾಸ ಯೋಜನೆ ನಿರ್ದೇಶಕಿ ರತ್ನ ಪಿ.ಎಸ್. ಅರವಿಂದನ್, ನಾಗರಾಜ್, ಕೆರೆ ಅಭಿವೃದ್ದಿ ಸಮಿತಿಯ, ರಂಗಪ್ಪ, ಕಾಟಪ್ಪ, ತಿಪ್ಪೇಸ್ವಾಮಿ, ಹನುಮಂತಪ್ಪ, ಮುಂತಾದ ವರು ಭಾಗವಹಿಸಿದ್ದರು.

# ದೇಶದ ಆರ್ಥಿಕಾಭಿವೃದ್ದಿಯಲ್ಲಿ ಮಹಿಳೆಯ ಪಾಲು ಇದೆ

## ಜಿಲ್ಲಾಡಳಿತ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೆಂಕಟೇಶ್



ದಾವಣಗೆರೆ, ಮಾ. 12- ದೇಶದ ಆರ್ಥಿಕಾಭಿವೃದ್ದಿಯಲ್ಲಿ ಮಹಿಳೆಯ ಪಾತ್ರ ಇದ್ದು ಎಲ್ಲಾ ಕ್ಷೇತ್ರಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇನ್ಸ್‌ಫೈರ್ ಇನ್‌ಕ್ಲೂಜನ್ ಧ್ಯೆಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಮಹಿಳೆಯರು ಇನ್ನೂ ಹೆಚ್ಚಿನ ರೀತಿಯಲ್ಲಿ ಆರ್ಥಿಕ ಸ್ವಾವಲಂಬಿಗಳಾಗಲು ಅವರಿಗೆ ಎಲ್ಲಾ ರೀತಿಯ ಬೆಂಬಲವನ್ನು ಹಾಗೂ ಸಹಕಾರವನ್ನು ನೀಡುವ ಆವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೆಣ್ಣನ್ನು ಗೌರವದಿಂದ ಕಾಣಬೇಕು, ಎಲ್ಲಿ ಹೆಣ್ಣನ್ನು ಗೌರವಿಸಲಾಗುತ್ತದೋ ಅಲ್ಲಿನ ವಾತಾವರಣ ಬಹಳ ಸೌಖ್ಯದಿಂದ ಕೂಡಿರುತ್ತದೆ. ಮೊದಲು ನಮ್ಮ ಮನೆಯನ್ನು ನೆಮ್ಮದಿ, ಸಂತೋಷದಿಂದ ಇಟ್ಟುಕೊಳ್ಳಬೇಕು. ದೌರ್ಜನ್ಯ ವನ್ನು ತಡೆಯುವುದು ಹೆಣ್ಣು ಮಕ್ಕಳಿಂದ ಸಾಧ್ಯ, ಪ್ರತಿಯೊಬ್ಬರ ಗಂಡಿನ ಯಶಸ್ಸಿನ ಹಿಂದೆ ಮಹಿಳೆಯೊಬ್ಬರು ಇರುತ್ತಾರೆ. ಅವರು ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಸಹೋದರಿಯಾಗಿ ಬಹುದೊಡ್ಡ ಪಾತ್ರ ವಹಿಸುತ್ತಾರೆ. ಒಂದು ಮಗುವಿನ ಬೆಳವಣಿಗೆ ಹಿಂದೆ ತಾಯಿಯ ಅಪಾರ ಶ್ರಮ ಇರುತ್ತದೆ. ತಾಯಿಗೆ ಮಕ್ಕಳು ತಪ್ಪು ಮಾಡಿದಾಗ ತಿದ್ದುವ ಗುಣವಿರುತ್ತದೆ, ಎಲ್ಲವನ್ನೂ ನಿಭಾಯಿಸುವವಳು ತಾಯಿಯಾಗಿದ್ದಾಳೆ.

ಎಲ್ಲಿ ನಾರಿಯನ್ನು ಗೌರವಿಸಲಾಗುತ್ತದೋ ಅಲ್ಲಿ ದೇವಿ ನೆಲೆಸುತ್ತಾಳೆ ಎಂದು ಹೇಳಲಾಗುತ್ತದೆ. ಮಹಿಳೆ ಮತ್ತು ಪುರುಷ ಸೇರಿರುವ ಸಮಾಜವಿದು. ಸಮಬಾಳು-ಸಮಪಾಲು ಎಂದಾಗ ಮಾತ್ರ ಅರ್ಥ ಲಭಿಸುವುದು. ಮಹಿಳೆ ಹೇಗೆ ಅಕ್ಕ, ತಂಗಿ, ಮಗಳು, ಅಮ್ಮ, ಗೆಳತಿ ಹೀಗೆ ಎಲ್ಲ ಪಾತ್ರ ವಹಿಸುತ್ತಾಳೋ ಪುರುಷ ಕೂಡ, ಅಣ್ಣ, ತಮ್ಮ, ಮಗ, ಗಂಡ, ಗೆಳೆಯ ಹೀಗೆ ಪಾತ್ರ ನಿರ್ವಹಿಸುತ್ತಾನೆ. ಆದ್ದರಿಂದ ಇಬ್ಬರ ಪಾತ್ರ ಸಮನಾಗಿದ್ದರೆ ಉತ್ತಮ ಸಮಾಜ ಸಾಧ್ಯ ಎಂದರು.

ಇದೇ ಸಂದಂರ್ಭದಲ್ಲಿ ಬೇಟಿ ಬಜಾವೋ ಬೇಟಿ ಪಡಾವೋ ಅಭಿಯಾನದಡಿ ಮಕ್ಕಳಿಗಾಗಿ ಇರುವ ಹಲವಾರು ಕಾಯ್ದೆ ಕಾನೂನುಗಳನ್ನು ಕುರಿತಾದ ಬೋಚರ್‌ಗಳನ್ನು ಸಹ ಬಿಡುಗಡೆ ಮಾಡಲಾಯಿತು.

ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು. ಎಸ್ ಬಳ್ಳಾರಿ, ಆರೋಗ್ಯ ಇಲಾಖೆಯ ಆರ್.ಸಿ.ಹೆಚ್ ಅಧಿಕಾರಿ ಡಾ.ರೇಣುಕಾರಾಧ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಮಹಾನಗರಪಾಲಿಕೆ ಆಯುಕ್ತೆ ರೇಣುಕಾ, ಸಹಾಯಕ ಕಾರ್ಮಿಕ ಆಯುಕ್ತರಾದ ವೀಣಾ, ಶಿಶು ಅಭಿವೃದ್ದಿ ಅಧಿಕಾರಿ ಕವಿತಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ತ್ರಿ-ಚಕ್ರವಾಹನಗಳನ್ನು ಪರವಾನಿಗೆ ಆಧಾರದಲ್ಲಿ ಪಡೆಯಲು ಮೀನು ಮಾರಾಟಗಾರರಿಂದ ಅರ್ಜಿ

ದಾವಣಗೆರೆ, ಮಾ.12 - ದಾವಣಗೆರೆ ಜಿಲ್ಲೆಯ ಎಲ್ಲಾ ವೃತ್ತಿಪರ ಮೀನುಗಾರರಿಗೆ ಪ್ರಸಕ್ತ ಸಾಲಿನ ಮತ್ಸ್ಯವಾಹಿನಿ ಯೋಜನೆಯಡಿ ತ್ರಿ-ಚಕ್ರವಾಹನಗಳನ್ನು ಪರವಾನಿಗೆ ಆಧಾರದಲ್ಲಿ ನೀಡಲು ಆಸಕ್ತ ಮೀನು ಮಾರಾಟಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ಥಳೀಯವಾಗಿ ಮೀನು ಸೇವನೆಯನ್ನು ಪ್ರೋತ್ಸಾಹಿಸಲು ಹಾಗೂ ತಾಜಾ ಮೀನು ಮತ್ತು ಮೀನು ಉತ್ಪನ್ನಗಳ ಮಾರಾಟಕ್ಕಾಗಿ ದಾವಣಗೆರೆ ಜಿಲ್ಲೆಗೆ ಒಟ್ಟು 4 ಭೌತಿಕ ಗುರಿಗಳಿದ್ದು, ಆಯ್ಕೆಯಾಗುವ ಅರ್ಜಿದಾರರು ಇಲಾಖೆಗೆ ಭದ್ರತಾ ಠೇವಣಿ ಸಾಮಾನ್ಯ ವರ್ಗದವರಿಗೆ ರೂ.1 ಲಕ್ಷ, ಪ.ಜಾತಿ, ಪ.ಪಂಗಡ, ಮಹಿಳೆಯರು ರೂ.50 ಸಾವಿರ ನೀಡಬೇಕಿರುತ್ತದೆ. ಜೊತೆಗೆ ಮಾಸಿಕ ರೂ.3,000 ಬಾಡಿಗೆ ಪಾವತಿಸಬೇಕಿರುತ್ತದೆ. ಅರ್ಜಿ ಸಲ್ಲಿಸಲು ಮಾರ್ಚ್ 25 ಕೊನೆಯ ದಿನವಾಗಿರುತ್ತದೆ.

ಆಸಕ್ತ ಮೀನುಗಾರರು, ಮೀನು ಕೃಷಿಕರು ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರು, ದಾವಣಗೆರೆ, ಚನ್ನಗಿರಿ, ಹರಿಹರ, ಹೊನ್ನಾಳಿ ಕಚೇರಿಗಳಿಗೆ ಸಂಪರ್ಕಿಸಿ ಅರ್ಜಿಗಳನ್ನು ಸಲ್ಲಿಸಬಹುದೆಂದು ಮೀನುಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಹರಿಹರದಲ್ಲಿ ನಾಳೆ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರ



ಹರಿಹರ, ಮಾ.12- ನಗರದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ, ಬಾಪೂಜಿ ಕ್ಯಾನ್ಸರ್ ಹಾಸ್ಪಿಟಲ್, ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ ನಾಡಿದ್ದು ದಿನಾಂಕ 14ರ ಗುರುವಾರ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಶಿಬಿರದ ಆಯೋಜಕ ಜಿ. ಮಂಜುನಾಥ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ದಾವಣಗೆರೆಯಲ್ಲಿ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ 2019 ರಲ್ಲಿ ಪ್ರಾರಂಭವಾಗಿದ್ದು, ಇಲ್ಲಿ ಸಮಗ್ರ ಕ್ಯಾನ್ಸರ್ ಚಿಕಿತ್ಸೆಯನ್ನು ನೀಡುತ್ತಾ ಬಂದಿದ್ದು, ಅದರಲ್ಲಿ ಸ್ತನ ಕ್ಯಾನ್ಸರ್, ಗರ್ಭಕೋಶ, ಗುದದ್ವಾರ, ಅನ್ನನಾಳ, ಬಾಯಿ ಕುತ್ತಿಗೆ, ಗಂಟಲು ಕ್ಯಾನ್ಸರ್, ಸೇರಿದಂತೆ ಇತರೆ ಕ್ಯಾನ್ಸರ್ ರೋಗಳಿಗೆ ಸರ್ಜರಿ, ಕೀಮೋಥೆರಫಿ, ಅತ್ಯಾಧುನಿಕ ರೆಡಿಯೇಷನ್ ಮೂಲಕ ರೋಗವನ್ನು ಗುಣಪಡಿಸುವ ವ್ಯವಸ್ಥೆ ಇರುತ್ತದೆ. ಹಾಗಾಗಿ ಹರಿಹರ ನಗರದ ಜನತೆಗೆ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ನಾಳೆ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಹೆಸರಾಂತ ವೈದ್ಯರ ತಂಡ ಆಗಮಿಸಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು.

ಎ.ಪಿ.ಎಲ್, ಬಿ.ಪಿ.ಎಲ್, ಯಶಸ್ವಿನಿ, ಆಯುಷ್ಮಾನ್ ಕಾರ್ಡ್ ಹಾಗೂ ಖಾಸಗಿ ಇನ್ಸೂರೆನ್ಸ್ ಕಾರ್ಡ್ ತಂದವರಿಗೆ ಉಚಿತ ಚಿಕಿತ್ಸೆ ಸೌಲಭ್ಯಗಳನ್ನು ನೀಡಲಾಗುತ್ತದೆ ಎಂದು ಹೇಳಿದರು.

ಆಸಕ್ತರು 948069834, 9742455516 ಸಂಖ್ಯೆಗೆ ಸಂಪರ್ಕಿಸಬಹುದು. ಆಧಾರ್ ಮತ್ತು ಬಿಪಿಎಲ್ ಕಾರ್ಡ್ ತರಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ಸಂತೋಷ ಕುಮಾರ್, ಪಿ.ಆರ್.ಓ ಸತೀಶ್ ಇತರರು ಹಾಜರಿದ್ದರು.

# ತ್ಯಾಜ್ಯ ನೀರಿನ ಸಂಸ್ಕರಣೆಯಲ್ಲಿ ಕರ್ನಾಟಕ ಮುಂಚೂಣಿ

ನವದೆಹಲಿ, ಮಾ. 12 – ತ್ಯಾಜ್ಯ ನೀರಿನ ಸಂಸ್ಕರಣೆಯಲ್ಲಿ ಕರ್ನಾಟಕ ಹಾಗೂ ಹರಿಯಾಣ ಉಳಿದ ಎಲ್ಲಾ ರಾಜ್ಯಗಳಿಗಿಂತ ಮುಂದಿವೆ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

2021ರಲ್ಲಿ ದೇಶದ ನಗರಗಳಿಂದ ಪ್ರತಿದಿನ 72 ಸಾವಿರ ದಶಲಕ್ಷ ಲೀಟರ್ ತ್ಯಾಜ್ಯ ನೀರು ಉತ್ಪಾದನೆಯಾಗುತ್ತಿದೆ. ಅದರಲ್ಲಿ ಕೇವಲ ಶೇ.28ರಷ್ಟನ್ನು ಮಾತ್ರ ಸಂಸ್ಕರಣೆ ಮಾಡಲಾಗುತ್ತಿದೆ. ಉಳಿದ ನೀರನ್ನು ಸಹಜ ಜಲ ಮೂಲಗಳಲ್ಲಿ ಬಿಡಲಾಗುತ್ತಿದೆ. ಇದರಿಂದ ನದಿ ಹಾಗೂ ಕೆರೆಗಳು ಕಲುಷಿತವಾಗುತ್ತಿವೆ ಎಂದು ವರದಿ ತಿಳಿಸಿದೆ.

ನಗರ ಪ್ರದೇಶಗಳು, ಅದರಲ್ಲೂ ಮಹಾನಗರಗಳಲ್ಲಿ ತ್ಯಾಜ್ಯದಿಂದ ಮಾಲಿನ್ಯವಾಗುವ ಪ್ರಮಾಣ ಹೆಚ್ಚಾಗಿದೆ ಎಂದು ಕೌನ್ಸಿಲ್ ಆನ್ ಎನರ್ಜಿ, ಎನ್ವಿರಾನ್‌ಮೆಂಟ್ ಅಂಡ್ ವಾಟರ್ ಸಂಸ್ಥೆ ನಡೆಸಿದ ಅಧ್ಯಯನ ತಿಳಿಸಿದೆ.

ಈ ಸಂಸ್ಥೆ ರೂಪಿಸಿರುವ ಶ್ರೇಯಾಂಕದಲ್ಲಿ ಕರ್ನಾಟಕ ಹಾಗೂ ಹರಿಯಾಣ ರಾಜ್ಯಗಳು ತ್ಯಾಜ್ಯ ನೀರಿನ ಸಂಸ್ಕರಣೆಯಲ್ಲಿ ಮುಂಚೂಣಿಯಲ್ಲಿವೆ.

# ಕಾಂಗ್ರೆಸ್‌ನಿಂದ 43 ಅಭ್ಯರ್ಥಿಗಳ ಎರಡನೇ ಪಟ್ಟಿ

ನವದೆಹಲಿ, ಮಾ. 12 – ಕಾಂಗ್ರೆಸ್ ಪಕ್ಷ ಲೋಕಸಭಾ ಚುನಾವಣೆಗಾಗಿ ತನ್ನ ಎರಡನೇ ಪಟ್ಟಿ ಬಿಡುಗಡೆ ಮಾಡಿದ್ದು, 43 ಅಭ್ಯರ್ಥಿಗಳ ಹೆಸರು ಪ್ರಕಟಿಸಲಾಗಿದೆ. ಪಕ್ಷದ ಹಿರಿಯ ನಾಯಕ ಕಮಲ್ ನಾಥ್ ಅವರ ಪುತ್ರ ನಕುಲ್ ನಾಥ್ ಮತ್ತೊಮ್ಮೆ ಮಧ್ಯ ಪ್ರದೇಶದ ಛಿಂದ್ವಾಡಾ ಕ್ಷೇತ್ರದಿಂದ ಟಿಕೆಟ್ ಪಡೆದಿದ್ದಾರೆ. ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ಪುತ್ರ ವೈಭವ್ ಗೆಹ್ಲೋಟ್ ಅವರು ರಾಜಸ್ಥಾನದ ಜಲೋರೆ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಲೋಕ ಸಭೆಯಲ್ಲಿ ಉಪ ನಾಯಕರಾಗಿರುವ ಗೌರವ್ ಗೊಗೊಯ್ ಅವರು ಅಸ್ಸಾಂನ ಜೊರ್ಹಟ್ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

# ನಂದಿತಾವರೆ : ಇಂದು ಬಸವಣ್ಣನ ತೇರು



ಮಲೇಬೆನ್ನೂರು ಸಮೀಪದ ನಂದಿತಾವರೆ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವವು ಇಂದು ತಡರಾತ್ರಿ ಜರುಗಲಿದೆ. ರಥೋತ್ಸವದ ಇಂದು ಬೆಳಿಗ್ಗೆ 5 ರಿಂದ 7 ರವರೆಗೆ ಶ್ರೀ ಬಸವೇಶ್ವರ ದೇವರಿಗೆ ರುದ್ರಾಭಿಷೇಕ ನಡೆಯಲಿದ್ದು, ಬೆಳಿಗ್ಗೆ 9.30 ರಿಂದ ಸುರಿಗಿ ನೀರು, ನಂತರ ಜಿಗಳಿ ಗ್ರಾಮದ ಗೌಡ್ರ ವಂಶಸ್ಥರು ಹಾಗೂ ಗ್ರಾಮಸ್ಥರಿಂದ ಬಾಸಿಂಗ ಧಾರಣೆ ಮಾಡಲಾಗುವುದು. ಬೆಳಿಗ್ಗೆ 10.30 ರಿಂದ ಕಿವಿ ಚುಚ್ಚುವುದು, ಶಸ್ತ್ರ, ಹರಕೆ ಒಪ್ಪಿಸುವ ಕಾರ್ಯಕ್ರಮಗಳು ನಡೆಯಲಿವೆ. ರಾತ್ರಿ 10.30ಕ್ಕೆ ಎಕ್ಕೆ ಗೊಂದಿಯಿಂದ ಬಸವೇಶ್ವರ ದೇವರನ್ನು ಮೆರವಣಿಗೆ ಮೂಲಕ ಸ್ಥಾಪಿಸಲಾಗುವುದು. ರಾತ್ರಿ 12 ಗಂಟೆ ನಂತರ ಶ್ರೀ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವ ಜರುಗಲಿದೆ. ಗುರುವಾರ ಓಕುಳಿ ನಂತರ ಕಂಕಣ ವಿಸರ್ಜನೆ ನಡೆಯಲಿದೆ.

# ಮೊದಲ ಬಾರಿ ತೇಜಸ್ ವಿಮಾನ ಪತನ



ನವದೆಹಲಿ, ಮಾ. 12 – ಹಗುರ ಸಮರ ವಿಮಾನವಾದ ತೇಜಸ್ ರಾಜಸ್ಥಾನದ ಜೈಸಲ್ಮಾರ್‌ನ ವಸತಿ ಪ್ರದೇಶದಲ್ಲಿ ಪತನಗೊಂಡಿದೆ. ಪೊಖ್ರಾನ್ ಮರುಭೂಮಿಯಲ್ಲಿ ನಡೆದ ಕಸರತ್ತಿನ ನಂತರ ಜೈಸಲ್ಮಾರ್ ವಾಯುನೆಲೆಗೆ ಮರಳುವಾಗ ಈ ಘಟನೆ ನಡೆದಿದೆ. ದೇಶೀಯವಾಗಿ ನಿರ್ಮಿಸಲಾಗಿರುವ ತೇಜಸ್ ವಿಮಾನ 2001ರಿಂದ ಹಾರಾಟ ನಡೆಸುತ್ತಿದೆ. ಇದೇ ಮೊದಲ ಬಾರಿಗೆ ಒಂದು ಇಂಜಿನ್‌ನ ವಿಮಾನ ಪತನಗೊಂಡಿದೆ. ಅಪಘಾತದಲ್ಲಿ ಯಾರಿಗೂ ಗಾಯಗಳಾಗಿಲ್ಲ.

ಪೈಲಟ್ ಯಶಸ್ವಿಯಾಗಿ ಹೊರ ಜಿಗಿದಿದ್ದಾರೆ. ಅಪಘಾತಕ್ಕೆ ಕಾರಣವೇನು ಎಂಬುದರ ತನಿಖೆ ನಡೆಸಲಾಗುತ್ತಿದೆ ಎಂದು ವಾಯುಪಡೆಯ ಹೇಳಿಕೆಯಲ್ಲಿ ತಿಳಿಸಲಾಗಿದೆ. ಪೊಖ್ರಾನ್ ಮರುಭೂಮಿಯ 100 ಕಿ.ಮೀ. ದೂರದಲ್ಲಿ ವಿಮಾನ ಪತನಗೊಂಡಿದೆ. ರಾಜಸ್ಥಾನದಲ್ಲಿ 'ಭಾರತ್ ಶಕ್ತಿ' ಎಂಬ ಬೃಹತ್ ಸಮರ ಪಂದ್ಯ ಆಯೋಜಿಸಲಾಗಿತ್ತು.

# ಹರಿಯಾಣ ಮುಖ್ಯಮಂತ್ರಿಯಾಗಿ ಸೈನಿ ಪ್ರಮಾಣ ವಚನ



ಚಂಡೀಘಡ, ಮಾ. 12 – ಹರಿಯಾಣ ರಾಜ್ಯ ಬಿಜೆಪಿ ಅಧ್ಯಕ್ಷ ನಯಾಬ್ ಸಿಂಗ್ ಸೈನಿ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿಯಾಗಿದ್ದ ಮನೋಹರ ಲಾಲ್ ಕಟ್ಟರ್ ಅವರು ತಮ್ಮ ಇಡೀ ಸಂಪುಟದೊಂದಿಗೆ ರಾಜೀನಾಮೆ ನೀಡಿದ ನಂತರ ಈ ಬೆಳವಣಿಗೆಯಾಗಿದೆ. ಬಿಜೆಪಿಯ ನಾಲ್ವರು ಹಾಗೂ ಓರ್ವ ಸ್ವತಂತ್ರ ಶಾಸಕ ಇದೇ ವೇಳೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಬೋಧಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಆಂಗ್ಲ ಭಾಷೆ ನಾಮಫಲಕ ತೆರವಿಗೆ ಸೂಚನೆ




ಮಲೇಬೆನ್ನೂರು, ಮಾ.12- ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಮಲೇಬೆನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಎಲ್ಲಾ ಉದ್ಯಮದಾರರು ಮತ್ತು ವ್ಯಾಪಾರಸ್ಥರು ನಾಮಫಲಕಗಳಲ್ಲಿ ಶೇ.60 ಕನ್ನಡವನ್ನು ಕಡ್ಡಾಯ ಬಳಸುವಂತೆ ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಅವರು ತಿಳುವಳಿಕೆ ಪತ್ರವನ್ನು ನೀಡಿ, ಎರಡು ದಿನದೊಳಗೆ ಆಂಗ್ಲ ಭಾಷೆಯ ನಾಮಫಲಕಗಳನ್ನು ತೆರವುಗೊಳಿಸಲು ಸೂಚಿಸಿದರು. ಪುರಸಭೆ ಪರಿಸರ ಇಂಜಿನಿಯರ್ ಉಮೇಶ್, ಇಂಜಿನಿಯರ್ ಮಂಜುನಾಥ್, ಶಿವರಾಜ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಮಲೇಬೆನ್ನೂರಿನಲ್ಲಿ ಸಂಭ್ರಮದ ಸಣ್ಣ ಉತ್ಸವ



ಮಲೇಬೆನ್ನೂರು, ಮಾ.12- ಇಲ್ಲಿನ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಪಟ್ಟಣದ ರಾಜ ಬೀದಿಗಳಲ್ಲಿ ಸಣ್ಣ ಉತ್ಸವವು ಸಂಭ್ರಮದಿಂದ ಜರುಗಿತು.

# ನಗರದಲ್ಲಿ ಇಂದು ಎಸ್ಸಿ, ಎಸ್ಟಿ ಸಭೆ

ಪ.ಜಾತಿ, ಪ.ಪಂಗಡ ಜನಾಂಗದವರ ಕುಂದು ಕೊರತೆ ಸಭೆ, ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆ ಹಾಗೂ ಜಿಲ್ಲಾ ಜಾಗೃತಿ ಸಭೆ ಇಂದು ಸಂಜೆ 4 ಗಂಟೆಗೆ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ್ ತಿಳಿಸಿದ್ದಾರೆ.

# ದುರ್ಗಾಂಭಿಕಾ ದೇವಿ ಜಾತ್ರೆ, ಭಕ್ತಾದಿಗಳಿಗೆ ಶೌಚಾಲಯದ ವ್ಯವಸ್ಥೆ

ದಾವಣಗೆರೆ, ಮಾ. 12 - ನಗರದಲ್ಲಿ ಎರಡು ವರ್ಷಕ್ಕೊಮ್ಮೆ ನಡೆಯುವ ದುರ್ಗಾಂಬಿಕಾ ದೇವಿ ಜಾತ್ರೆಯ ಪ್ರಯುಕ್ತ ದೇವಾಲಯಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಶೌಚಾಲಯಗಳ ವ್ಯವಸ್ಥೆ ಕಲ್ಪಿಸಲಾಗಿದೆ.

ಇದೇ ದಿನಾಂಕ 18 ರಿಂದ 21 ರವರೆಗೆ ವಿರಕ್ತ ಮಠ, ದೊಡ್ಡಪೇಟೆ, ನಗರ ಕುಟುಂಬ ಕಲ್ಯಾಣ ಕೇಂದ್ರ-1, ದೊಡ್ಡಪೇಟೆ, ಎಸ್.ವಿ.ಎಸ್ ಶಾಲೆ, ಎಸ್.ಕೆ.ಪಿ. ರಸ್ತೆ, ಕನ್ನಿಕಾ ಪರಮೇಶ್ವರಿ ದೇವಸ್ಥಾನ ಸಂಘ (ರಿ), #708, ಎಸ್.ಕೆ.ಪಿ. ದೇವಸ್ಥಾನದ ರಸ್ತೆ , ಮಾರ್ಕೇಂಡೇಶ್ವರ ಕಲ್ಯಾಣ ಮಂಟಪ, ಎಸ್.ಕೆ.ಪಿ. ರಸ್ತೆ, ನಾಮದೇವ ಸಿಂಪಿ ಕಲ್ಯಾಣ ಮಂಟಪ, ದೊಡ್ಡಪೇಟೆ ಇಲ್ಲಿನ ಶೌಚಾಲಯಗಳನ್ನು ಉಪಯೋಗಿಸುವ ಮೂಲಕ ದೇವಾಲಯದ ಸುತ್ತಮುತ್ತಲಿನ ಆವರಣವನ್ನು ಸ್ವಚ್ಛವಾಗಿರಿಸಲು ಸಹಕರಿಸುವಂತೆ ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

# ಸೆ.17 ಹೈದರಾಬಾದ್ ವಿಮೋಚನಾ ದಿನವಾಗಿ ಆಚರಣೆ : ಕೇಂದ್ರದ ಘೋಷಣೆ

ನವದೆಹಲಿ, ಮಾ. 12 – ಪ್ರತಿ ವರ್ಷ ಸೆಪ್ಟೆಂಬರ್ 17 ಅನ್ನು ಹೈದರಾಬಾದ್ ವಿಮೋಚನಾ ದಿನವನ್ನಾಗಿ ಆಚರಿಸಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತು 13 ತಿಂಗಳಾದರೂ ಹೈದರಾಬಾದ್‌ಗೆ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಸೆಪ್ಟೆಂಬರ್ 17, 1948ರಲ್ಲಿ ಆಪರೇಷನ್ ಪೋಲೋ ಕಾರ್ಯಾಚರಣೆ ಮಾಡಿದ ನಂತರ ಈ ವಲಯ ನಿಜಾಮರ ಆಡಳಿತದಿಂದ ವಿಮೋಚನೆಗೊಂಡಿತ್ತು ಎಂದು ಕೇಂದ್ರ ಗೃಹ ಸಚಿವಾಲಯದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಸೆಪ್ಟೆಂಬರ್ 17 ಅನ್ನು ಹೈದರಾಬಾದ್ ವಿಮೋಚನಾ ದಿನವಾಗಿ ಆಚರಿಸಬೇಕು ಎಂಬ ಬೇಡಿಕೆ ಇಲ್ಲಿನ ಜನರಿಂದ ಇತ್ತು. ಹೀಗಾಗಿ ದೇಶಪ್ರೇಮ ಬೆಳೆಸಲು ಹೈದರಾಬಾದ್ ವಿಮೋಚನಾ ದಿನ ಆಚರಿಸಲಾಗುವುದು ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

# ಲೋಕಸಭೆಗೆ ಸ್ಪರ್ಧಿಸಲು ಹಿರಿಯ ನಾಯಕರಿಗೆ ಹಿಂಜರಿಕೆ ಇಲ್ಲ : ಖರ್ಗೆ

ನವದೆಹಲಿ, ಮಾ. 12 – ಹಿರಿಯ ನಾಯಕರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಹಿಂಜರಿಯುತ್ತಿದ್ದಾರೆ ಎಂಬ ಮಾತುಗಳನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಳ್ಳಿ ಹಾಕಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾವು ಸ್ಪರ್ಧಿಸಲು ಹಿಂಜರಿಯುತ್ತಿದ್ದೇವೆ ಎಂಬುದು ತಪ್ಪು. ನನಗೆ 83 ವರ್ಷ ವಯಸ್ಸಾಗಿದೆ. ಪತ್ರಕರ್ತರಾದ ನೀವು 65ಕ್ಕೇ ನಿವೃತ್ತರಾಗಿರುತ್ತೀರಿ. ನನಗೀಗ 83 ವರ್ಷ ವಯಸ್ಸಾಗಿದೆ ಎಂದರು.

ಅವಕಾಶ ಕೊಟ್ಟರೆ ಎಲ್ಲರೂ ಸ್ಪರ್ಧಿಸುತ್ತಾರೆ. ನಾನು ಸ್ಪರ್ಧಿಸಬೇಕು ಎಂದು ಪಕ್ಷದ ಕಾರ್ಯಕರ್ತರು ಹೇಳಿದರೆ ಖಂಡಿತಾ ಸ್ಪರ್ಧಿಸುತ್ತೇನೆ. ಕೆಲವೊಂದು ಸ್ಥಾನಗಳಲ್ಲಿ ಹತ್ತಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ ಎಂದು ಖರ್ಗೆ ತಿಳಿಸಿದರು.


**ತಕ್ಷಣ ಬೇಕಾಗಿದ್ದಾರೆ**

ಆಟೋಮೊಬೈಲ್ ಅನುಭವವಿರುವ

• ಸರ್ವೀಸ್ ಟೆಕ್ನಿಷಿಯನ್ - 4 • ಸರ್ವೀಸ್ ಹೆಲ್ಪರ್ಸ್ - 6

• ಟೆಲಿಕಾಲರ್ (CRE) - 1 (ಮಹಿಳೆಯರು) • ಸೇಲ್ಸ್ ಎಕ್ಸಿಕ್ಯೂಟಿವ್ಸ್ - 4

(ದಾವಣಗೆರೆ, ಹರಪನಹಳ್ಳಿ, ಜಗಳೂರು ಮತ್ತು ಹೊನ್ನಾಳಿ)


**ಗಜೇಂದ್ರ ಟ್ರಕ್ಸ್ ಸೇಲ್ಸ್ ಮತ್ತು ಸರ್ವೀಸಸ್**

**GAJENDRA TRUCKS SALES & SERVICES**

TATA - Small Commercial Vehicles Dealer

ಓಷಿಯನ್ ಪಾರ್ಕ್ ಹೋಟೇಲ್ ಪಕ್ಕ, ಜಿ.ಎಂ.ಐ.ಟಿ. ಕಾಲೇಜು ಎದುರು, ಪಿ.ಬಿ. ರಸ್ತೆ, ದಾವಣಗೆರೆ - 577006. ಫೋ. : **63648 88466, 63648 88475**


# ಎಆರ್‌ಜಿ ಕಾಲೇಜಿನ ನಕ್ಷತ್ರ ನಾಯಕ ರಾಷ್ಟ್ರ ಮಟ್ಟದ ಈಜು ಸ್ಪರ್ಧೆಗೆ ಆಯ್ಕೆ



ದಾವಣಗೆರೆ, ಮಾ. 12 - ಕರ್ನಾಟಕ ರಾಜ್ಯ ಸ್ವಿಮ್ಮಿಂಗ್ ಅಸೋಸಿಯೇಷನ್ ವತಿಯಿಂದ ಬೆಂಗಳೂರಿನ ಝೀ ಸ್ವಿಮ್ಮಿಂಗ್ ಅಕಾಡೆಮಿಯಲ್ಲಿ ನಡೆದ ರಾಜ್ಯ ಮಟ್ಟದ ಸ್ವಿಮ್ಮಿಂಗ್ ಚಾಂಪಿಯನ್ ಶಿಪ್‌ನ ವಿವಿಧ ವಿಭಾಗಗಳಲ್ಲಿ ಪ್ರಥಮ ಸ್ಥಾನದೊಂದಿಗೆ ಮೂರು ಬಂಗಾರದ ಪದಕ ಪಡೆದಿರುವ ನಗರದ ಎ ಆರ್ ಜಿ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ನಕ್ಷತ್ರ ನಾಯಕ ರಾಷ್ಟ್ರ ಮಟ್ಟದ ಈಜು ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

50 ಮೀಟರ್ ಫ್ರೀ ಸ್ಟೈಲ್, ಬ್ಯಾಕ್ ಸ್ಟ್ರೋಕ್ ಮತ್ತು 100 ಮೀಟರ್ ಬ್ಯಾಕ್ ಸ್ಟ್ರೋಕ್ ಹೀಗೆ ಮೂರು ವಿಭಾಗಗಳ 3 ಚಿನ್ನದ ಪದಕಗಳನ್ನು ನಕ್ಷತ್ರ ನಾಯ್ಕ ಗಳಿಸಿದ್ದಾರೆ.

ಈ ಮೂಲಕ ಇದೇ ದಿನಾಂಕ 29 ರಿಂದ 31 ರ ವರೆಗೆ ಮಧ್ಯಪ್ರದೇಶದ ಗ್ವಾಲಿಯರ್ ನಲ್ಲಿ ನಡೆಯಲಿರುವ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಗೆ ನಕ್ಷತ್ರ ನಾಯಕ ಆಯ್ಕೆಯಾಗಿದ್ದಾರೆ.

# ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದ ಶಾಸಕ ಹರೀಶ್



ಹರಿಹರ, ಮಾ. 12 - ಹರಿಹರದಲ್ಲಿ ಇದೇ ದಿನಾಂಕ 18 ಮತ್ತು 19 ರಂದು ಹಮ್ಮಿಕೊಂಡಿರುವ ದಾವಣಗೆರೆ ಜಿಲ್ಲಾ 13ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಗಳನ್ನು ಇಲ್ಲಿನ ತಾ. ಪಂ. ಸಭಾಂಗಣದ ಮುಂಭಾಗದಲ್ಲಿ ಶಾಸಕ ಬಿ. ಪಿ. ಹರೀಶ್, ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರ ನೇತೃತ್ವದಲ್ಲಿ ಅಧಿಕೃತವಾಗಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಹರಿಹರ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ, ಪ್ರಗತಿಪರ ಚಿಂತಕ ಹೆಚ್. ಕೆ. ಕೊಟ್ರಪ್ಪ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ. ಕೆ. ಭೂಮೇಶ್, ತಾ. ಕಸಾಪ ಕಾರ್ಯದರ್ಶಿ ಚಿದಾನಂದ ಕಂಚಿಕೆರೆ ಹಾಗೂ ಪತ್ರಕರ್ತ ಶೇಖರಗೌಡ ಪಾಟೀಲ್, ಗೀತಾ ಕೊಂಡಜ್ಜಿ, ದಂಡಿ ತಿಪ್ಪೇಸ್ವಾಮಿ, ನಾಗರಾಜ, ಎಂ. ಷಡಕ್ಷರಪ್ಪ ಬೇತೂರು, ಕೆ ಶಿವಶಂಕರ್ ಮತ್ತಿತರರು ಉಪಸ್ಥಿತರಿದ್ದರು.


**TEACHERS WANTED FOR DAVANGERE SCHOOL & HARIHAR SCHOOL**

| Qualification | No. of Posts |
|---|---|
| B.Sc B.Ed PCM | 6 Posts |
| B.Sc B.Ed CBZ | 6 Posts |
| BA B.Ed ( for English) | 6 Posts |
| NTC | 6 Posts |
| B.P.Ed/C.P.Ed | 4 Posts |

While coming for interview the candidates should bring Resume, Original Certificates & their photo copies.

**- : Place of Interview, Date & Timings : -**

16.03.2024 on Saturday at 10Am to 2Pm

**Shree Ramakrishna International School**

DCM Township, Davangere.

**Mob: 8095008434, 8095009629**

**Admissions are Opened for Play Group, LKG, UKG, 1st to 8th Standard Classes**

**School Bus Facility is available for Rural & Urban places.**

# ನಾಮಫಲಕದಲ್ಲಿ ಕನ್ನಡ ಭಾಷೆ ಶೇ. 60 ರಷ್ಟು ಪ್ರದರ್ಶನ

## ಇಂದಿನಿಂದ ಕಡ್ಡಾಯ ಅನುಷ್ಠಾನ ; ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಸೂಚನೆ



### ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2024

ದಾವಣಗೆರೆ, ಮಾ. 12 - ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2024ರ ತಿದ್ದುಪಡಿಯನ್ವಯ ನಾಮಫಲಕದ ಮೇಲ್ಭಾಗದಲ್ಲಿ ಶೇ 60 ರಷ್ಟು ಕನ್ನಡ ಭಾಷೆ ಬಳಕೆ ಕಡ್ಡಾಯವಾಗಿದ್ದು, ಇದರ ಅನುಷ್ಠಾನ ನಾಳೆ ದಿನಾಂಕ 13 ರಿಂದ ಜಾರಿಗೆ ಬರಲಿದೆ. ಆದರೆ ಸ್ವಯಂ ಪ್ರೇರಿತವಾಗಿ ಕನ್ನಡ ಭಾಷಾ ಪ್ರದರ್ಶನಕ್ಕೆ ಮುಂದಾಗಬೇಕೆಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ 2022 ಮತ್ತು ತಿದ್ದುಪಡಿ ವಿಧೇಯಕ-2024 ರನ್ವಯ ನಾಮಫಲಕದಲ್ಲಿ ಶೇ. 60 ರಷ್ಟು ಕನ್ನಡ ಪ್ರದರ್ಶನವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಕರೆಯಲಾಗಿದ್ದ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿನ ಎಲ್ಲಾ ಉದ್ದಿಮೆಗಳು, ಕಾರ್ಖಾನೆಗಳು, ಬ್ಯಾಂಕ್‌ಗಳು, ಸಂಘ, ಸಂಸ್ಥೆಗಳು, ಅಂಗಡಿ ಮುಂಗಟ್ಟುಗಳು, ಶಾಲಾ-ಕಾಲೇಜುಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಶೇ 60 ರಷ್ಟು ಕನ್ನಡ ಭಾಷೆಯ ಪ್ರದರ್ಶನ ಇರಲೇಬೇಕಾಗುತ್ತದೆ. ಕನ್ನಡವನ್ನು ಸಮರ್ಪಕವಾಗಿ ಅನುಷ್ಠಾನ ಮಾಡದಿದ್ದಲ್ಲಿ 5 ಸಾವಿರಗಳಿಂದ 10 ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ. ರಾಜ್ಯದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ ಎಲ್ಲರೂ ಸ್ವಯಂ ಪ್ರೇರಿತವಾಗಿ ಕನ್ನಡ ಬಳಕೆ ಮಾಡಬೇಕು. ಒಂದು ವೇಳೆ ಸಂಪೂರ್ಣವಾಗಿ ಕನ್ನಡ ಬಳಕೆ ಮಾಡುವುದಾದರೇ ಯಾವುದೇ ಅಭ್ಯಂತರ ಇರುವುದಿಲ್ಲ. ಬ್ಯಾಂಕ್, ಉದ್ದಿಮೆಗಳು ತ್ರಿಭಾಷಾ ಸೂತ್ರ ಪಾಲನೆ ಮಾಡುತ್ತಿದ್ದಲ್ಲಿ ಮೊದಲ ಸಾಲಿನಲ್ಲಿ ಕನ್ನಡ ಭಾಷೆ ಇರಬೇಕು ಎಂದರು.

ಜಿಲ್ಲೆಯ ನಗರ, ಪಟ್ಟಣದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ಪಡೆದ 12846 ಜನರು ಇದ್ದಾರೆ ಎಂದು ತಿಳಿದು ಬಂದಿದೆ. ಈಗಾಗಲೇ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಉದ್ದಿಮೆದಾರರ ಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಪ್ರದರ್ಶನದ ಅನುಷ್ಠಾನ ಮಾಡಲಾಗಿದ್ದು ಶೇ 50 ಕ್ಕಿಂತಲೂ ಹೆಚ್ಚಿದೆ. ಇದನ್ನು ಶೇ 100 ರಷ್ಟು ಎಲ್ಲಾ ಉದ್ದಿಮೆಗಳು, ಸಂಸ್ಥೆಗಳಲ್ಲಿ ಅನುಷ್ಠಾನ ಮಾಡಲು ಕಾರ್ಯಪಡೆಯನ್ನು ರಚಿಸಲಾಗಿದೆ. ಕಾನೂನು ಅನುಷ್ಠಾನಕ್ಕೂ ಮೊದಲು ಸ್ವಯಂ ಪ್ರೇರಿತವಾಗಿ ಅಳವಡಿಸಿಕೊಳ್ಳಲು ಮಾರ್ಚ್ 13 ರ ವರೆಗೆ ಅವಕಾಶ ನೀಡಲಾಗಿದ್ದು, ನಂತರದಲ್ಲಿ ಅನುಷ್ಠಾನ ಮಾಡದ ಉದ್ದಿಮೆದಾರರು, ಸಂಸ್ಥೆಗಳ ಮೇಲೆ ಕಾನೂನು ಕ್ರಮ ಜರುಗಿಸುವ ಮೂಲಕ ಕಡ್ಡಾಯವಾಗಿ ಅನುಷ್ಠಾನ ಮಾಡಲು ಆಯಾ ವಿಭಾಗದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣ ನಾಯ್ಕ ಗ್ರಾಮೀಣ ಭಾಗದ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಉದ್ದಿಮೆ, ಸಂಘ, ಸಂಸ್ಥೆಗಳ ನಾಮಫಲಕದಲ್ಲಿ ಕನ್ನಡ ಭಾಷೆಯ ಶೇ 60 ರಷ್ಟು ಪ್ರದರ್ಶನಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಂತೇಶ್ ಮಾತನಾಡಿ ನಗರ, ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಈಗಾಗಲೇ ಪರವಾನಗಿ ಪಡೆದವರಿಗೆ ಸೂಚನಾ ಪತ್ರ ನೀಡುವ ಮೂಲಕ ನಾಮಫಲಕದಲ್ಲಿ ಶೇ 60 ರಷ್ಟು ಕನ್ನಡ ಭಾಷೆಯ ಪ್ರದರ್ಶನ ಮಾಡುವಂತೆ ತಿಳಿಸಲಾಗಿದೆ ಎಂದರು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು, ಪಾಲಿಕೆ ಆಯುಕ್ತರು, ಕಾರ್ಮಿಕ ಇಲಾಖೆ ಅಧಿಕಾರಿಗಳು ಸೇರಿದಂತೆ ಇನ್ನಿತರೆ ಇಲಾಖೆ ಅಧಿಕಾರಿಗಳು ಸದಸ್ಯರಿರುವರು. ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಸಮಿತಿ ಇದ್ದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಮುಖ್ಯಾಧಿಕಾರಿಗಳು ಸದಸ್ಯರಿದ್ದು ತಹಶೀಲ್ದಾರರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಸಭೆಯಲ್ಲಿ ಉಪವಿಭಾಗಾಧಿಕಾರಿ ದುರ್ಗಶ್ರೀ, ಅಭಿಷೇಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಾಮದೇವಪ್ಪ, ಕನ್ನಡ ಪರ ಸಂಘಟನೆಯ ರಾಮೇಗೌಡ, ಶಿವಣ್ಣ, ನಾಗೇಂದ್ರ ಬಂಡೇಕರ್, ಸುಧಾಕರ್ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕಡ್ಲೇಬಾಳ್‌ನಲ್ಲಿ ನಾಳೆ-ನಾಡಿದ್ದು ಶ್ರೀ ನಾಗಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದ ವಾರ್ಷಿಕೋತ್ಸವ



ದಾವಣಗೆರೆ, ಮಾ. 12 - ಇಲ್ಲಿಗೆ ಸಮೀಪದ ಶ್ರೀ ಕ್ಷೇತ್ರ ಕಡ್ಲೇಬಾಳು ಗ್ರಾಮದ ಶ್ರೀ ನಾಗಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದಲ್ಲಿ ದೇವಸ್ಥಾನದ 6ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವು ಇದೇ ದಿನಾಂಕ 14 ಮತ್ತು 15ರಂದು ನಡೆಯಲಿದೆ.

14ರ ಗುರುವಾರ ಪ್ರಾತಃಕಾಲ ಗಣಪತಿ ಪ್ರಾರ್ಥನೆ, ಗಣಪತಿ ಹೋಮ, ನಾಗರಾಜ ಮೂಲಮಂತ್ರ ಹೋಮ, ಪೂರ್ಣಾಹುತಿ, ತೀರ್ಥಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ, ಸಂಜೆ ಮಂಗಳಾರತಿ ಜರುಗಲಿದೆ.

15ರ ಶುಕ್ರವಾರ ಪ್ರಾತಃಕಾಲ ಶ್ರೀ ನಾಗಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ವಿಶೇಷ ಪಂಚಾಮೃತಾಭಿಷೇಕ, ಪವಮಾನ ಅಭಿಷೇಕ, ರುದ್ರಾಭಿಷೇಕ, ವಿಶೇಷ ಅಲಂಕಾರ, ಸಾಮೂಹಿಕ ಆಶ್ಲೇಷ ಬಲಿ ಪೂಜೆ, ಮಹಾಪೂರ್ಣಾಹುತಿ, ರಥೋತ್ಸವ, ಅನ್ನ ಸಂತರ್ಪಣೆ ಆಯೋಜನೆಗೊಂಡಿದೆ. ಈ ಎಲ್ಲಾ ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯವನ್ನು ಬೆಂಗಳೂರು ಚಾಮರಾಜಪೇಟೆಯ ಅವಿಚ್ಛಿನ್ನ ಪರಂಪರಾ ಕೂಡ್ಲಿ ಶೃಂಗೇರಿ ಮಹಾಸಂಸ್ಥಾನದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ವಿದ್ಯಾವಿಶ್ವೇಶ್ವರ ಭಾರತಿ ಮಹಾಸ್ವಾಮೀಜಿ ವಹಿಸುವರು.

## ಸಿ.ಎ.ಎ.ಗೆ ಸಿಎಂ ಸಿದ್ದರಾಮಯ್ಯ ಆಕ್ಷೇಪ

ಬೆಂಗಳೂರು, ಮಾ. 12 – ಸಿ.ಎ.ಎ. ಜಾರಿ ಕುರಿತು ಆಕ್ಷೇಪ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಧರ್ಮ ಆಧರಿತ ಪೌರತ್ವವನ್ನು ವಿರೋಧಿಸುವುದಾಗಿ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಿ.ಎ.ಎ. ಜಾರಿಗೆ ತರಲಾಗುತ್ತಿದೆ. ಇದೆಲ್ಲ ಬಿಜೆಪಿಯ ಗುಪ್ತ ಅಜೆಂಡಾ ಎಂದೂ ಅವರು ಟೀಕಿಸಿದ್ದಾರೆ.


**ಸಾರ್ವಜನಿಕರ ಗಮನಕ್ಕೆ**

ಈ ಮೂಲಕ ಸಂಬಂಧಿಸಿದವರೆಲ್ಲರಿಗೂ ತಿಳಿಯಪಡಿಸುವುದೇನೆಂದರೆ ನಂ. 17, ಪಿ.ಜೆ. ಬಡಾವಣೆ, ಅಕ್ಕಮಹಾದೇವಿ ರಸ್ತೆ, ದಾವಣಗೆರೆ-577002 ಯಲ್ಲಿರುವ **ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ. ಲಿಮಿಟೆಡ್** ಇದರಲ್ಲಿನ 31 ನೇ ಮಾರ್ಚ್ 2020 ರವರೆಗೆ ದಾಖಲಾಗಿರುವ ಒಳರೋಗಿಗಳ ಕೇಸ್ ಶೀಟುಗಳನ್ನು ಹಾಗೂ ಹೊರ ರೋಗಿ ವಿಭಾಗದ ದಾಖಲೆಗಳನ್ನು ಕಾನೂನಿನ ಮಿತಿಗೆ ಒಳಪಟ್ಟು ವಿಲೇ ಮಾಡಲು ನಿರ್ಧರಿಸಿದ್ದು ಈ ಬಗ್ಗೆ ಅಗತ್ಯ ಮಾಹಿತಿ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಅದನ್ನು 30ನೇ ಜೂನ್ 2024 ರ ಒಳಗಾಗಿ ಸಲ್ಲಿಸತಕ್ಕದ್ದು, 1 ನೇ ಜುಲೈ 2024 ರ ನಂತರ ಮೇಲ್ಕಂಡ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ.

ಇದು ಸಾರ್ವಜನಿಕರ ಅವಗಾಹನೆಗಾಗಿ

ದಿನಾಂಕ : 09 ನೇ ಮಾರ್ಚ್ 2024

ದಾವಣಗೆರೆ

ಆಡಳಿತ ಮಂಡಳಿ

**ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ ಲಿ,**

ದಾವಣಗೆರೆ


## ಸಿಎಎಗೆ ವಿರೋಧ : ವಿಪಕ್ಷಗಳ ಮಾನವೀಯತೆ ಸತ್ತಿದೆಯೇ ? ಕೇಂದ್ರ ಸಚಿವ ಠಾಕೂರ್ ಪ್ರಶ್ನೆ

ಚಂಡೀಘಡ, ಮಾ. 12 – ನೆರೆ ದೇಶಗಳಿಂದ ಸಂತ್ರಸ್ತರಾಗಿ ಬಂದಿರುವ ಧಾರ್ಮಿಕ ಅಲ್ಪಸಂಖ್ಯಾತರಿಗೆ ಪೌರತ್ವ ನೀಡುವ ಸಿ.ಎ.ಎ. ವಿರೋಧಿಸುತ್ತಿರುವ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿರುವ ಕೇಂದ್ರ ಸಚಿವ ಅನುರಾಗ್ ಠಾಕೂರ್, ಅವರ ಮಾನವೀಯತೆ ಸತ್ತು ಹೋಗಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಪೀಡನೆಗೆ ಗುರಿಯಾಗಿ ನಿರಾಶ್ರಿತರಾಗಿ ಬಂದಿರುವ ಹಿಂದೂ ಕುಟುಂಬಗಳು ಎಲ್ಲಿಗೆ ಹೋಗಬೇಕು? ಹಾಡು ಹಗಲೇ ಅವರ ಮೇಲೆ ಅತ್ಯಾಚಾರ ಎಸಗಲಾಗಿದೆ. ಅವರನ್ನು ಬಲವಂತದ ಮದುವೆ ಹಾಗೂ ಮತಾಂತರಕ್ಕೆ ಗುರಿ ಪಡಿಸಲಾಗುತ್ತಿದೆ ಎಂದು ಠಾಕೂರ್ ಹೇಳಿದರು.

ಆಫ್ಘಾನಿಸ್ತಾನದಲ್ಲಿ ಪೀಡನೆಗೆ ಗುರಿಯಾದ ಸಿಖ್‌ರನ್ನು ಹಾಗೂ ಅವರ ಧರ್ಮ ಗ್ರಂಥವಾದ ಗುರು ಗ್ರಂಥ ಸಾಹಿಬ್ ಅನ್ನು ಮೋದಿ ಸರ್ಕಾರ ರಕ್ಷಿಸಿದೆ ಎಂದೂ ಸಚಿವರು ಹೇಳಿದ್ದಾರೆ. ಪೌರತ್ವಕ್ಕಾಗಿ 70 ವರ್ಷಗಳಿಗೂ ಹೆಚ್ಚು ಕಾಲ ಕಾಯುತ್ತಿದ್ದವರಿಗೆ ಸಿ.ಎ.ಎ.ದಿಂದ ನೆರವು ಸಿಗಲಿದೆ ಎಂದು ಠಾಕೂರ್ ತಿಳಿಸಿದ್ದಾರೆ.



## ‘ಶಿವರಾತ್ರಿ’ ಯಲ್ಲಿ ಚಿರಂತನದ ‘ನೃತ್ಯ ಸಮರ್ಪಣೆ’

ದಾವಣಗೆರೆ, ಮಾ. 12 - ನಗರದ ಬಿ.ಐ.ಇ.ಟಿ ಕಾಲೇಜಿನ ಶಿವ ಧ್ಯಾನ ಮಂದಿರದ ಆವರಣದಲ್ಲಿ ಆಯೋಜಿಸಲಾಗಿದ್ದ ‘ಭಕ್ತಿ-ಮಂಜರಿ’ ಕಾರ್ಯಕ್ರಮದಲ್ಲಿ ಚಿರಂತನ ಸಾಂಸ್ಕೃತಿಕ ಸಂಸ್ಥೆಯ ವಿದ್ಯಾರ್ಥಿಗಳು ಶಿವನ ಕುರಿತಾದ ಸ್ತುತಿಗಳನ್ನು ಪ್ರಸ್ತುತಪಡಿಸಿದರು.

## ಸಿ.ಎ.ಎ.ಗೆ ವೆಬ್ ತಾಣ ಆರಂಭ

ನವದೆಹಲಿ, ಮಾ. 12 – ಸಿ.ಎ.ಎ. ಮೂಲಕ ಪೌರತ್ವ ಪಡೆಯಲು ಅರ್ಜಿ ಸಲ್ಲಿಸಲು ಕೇಂದ್ರ ಸರ್ಕಾರ ವೆಬ್ ತಾಣವೊಂದಕ್ಕೆ ಚಾಲನೆ ನೀಡಿದೆ. ನಿನ್ನೆಯಷ್ಟೇ ಸಿ.ಎ.ಎ. ನಿಯಮಗಳ ಕುರಿತು ಅಧಿಸೂಚನೆ ಹೊರಡಿಸಲಾಗಿತ್ತು. ನಾಗರಿಕರು ಅರ್ಜಿ ಸಲ್ಲಿಸಲು https://indiancitizenshiponline.nic.in/ ವೆಬ್ ತಾಣವನ್ನು ರೂಪಿಸಲಾಗಿದೆ. ಮೊಬೈಲ್ ಆಪ್ ಮೂಲಕ ಅರ್ಜಿ ಸಲ್ಲಿಸಲು ಶೀಘ್ರ ವ್ಯವಸ್ಥೆ ಮಾಡಲಾಗುವುದು.

## ನಗರದಲ್ಲಿ ಇಂದು ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭ, ಮಹಿಳಾ ದಿನಾಚರಣೆ



ವನಿತಾ ಸಮಾಜದಿಂದ ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಇಂದು ಸಂಜೆ 5 ಗಂಟೆಗೆ ವನಿತಾ ಸಮಾಜದ ಶ್ರೀ ಸತ್ಯ ಸಾಯಿಮಂದಿರದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಹಿರಿಯ ಲೇಖಕಿ ಬಿ.ಟಿ. ಜಾಹ್ನವಿ ಪಾಲ್ಗೊಳ್ಳುವರು. ಅಧ್ಯಕ್ಷತೆಯನ್ನು ಮಾಜಿ ಸಚಿವೆ, ಗೌರವಾಧ್ಯಕ್ಷೆ ಡಾ. ಸಿ. ನಾಗಮ್ಮ ಕೇಶವಮೂರ್ತಿ ವಹಿಸುವರು. ರಾಧಮ್ಮ ಚನ್ನಗಿರಿ ರಂಗಪ್ಪ ವನಿತಾ ಸೇವಾ ಪ್ರಶಸ್ತಿಯನ್ನು ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ ನ ಪ್ರಧಾನ ಛೇರ್ಮನ್ ಸಿ.ಆರ್. ವಿರೂಪಾಕ್ಷಪ್ಪ ಅವರು ವನಿತಾ ಸೇವಾ ಪ್ರಶಸ್ತಿಗೆ ಭಾಜನರಾಗಿರುವ ಡಾ. ರಶ್ಮಿ ಶೆಟ್ಟಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡುವರು.

## ಅತ್ತಿಗೆರೆಯಲ್ಲಿಂದು ಕ್ಷೇತ್ರೋತ್ಸವ

ಮೈಕ್ರೋಬಿ ಫೌಂಡೇಷನ್, ಯಲಹಂಕ, ಬೆಂಗಳೂರು ವತಿಯಿಂದ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಶ್ರೀ ಶಿವನಾರದ ಮುನಿ ಕೃಷಿ ಮಾಹಿತಿ ಕೇಂದ್ರ ಮತ್ತು ಅತ್ತಿಗೆರೆ ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ಕ್ಷೇತ್ರೋತ್ಸವ, ಅನ್ನದಾತರಿಗೆ ಸನ್ಮಾನ ಕಾರ್ಯಕ್ರಮ ಇಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಮುಖ್ಯ ಅತಿಥಿಗಳಾಗಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಶ್ರೀನಿವಾಸ್ ಚಿಂತಾಲ್, ತೋಟಗಾರಿಕಾ ಉಪನಿರ್ದೇಶಕ ಡಾ. ಜಿ.ಸಿ ರಾಘವೇಂದ್ರ ಪ್ರಸಾದ್, ಖ್ಯಾತ ಸಾವಯವ ಕೃಷಿ ತಜ್ಞ, ಸಂಸ್ಥೆಯ ಅಧ್ಯಕ್ಷ ಡಾ. ಕೆ.ಆರ್. ಹುಲ್ಲುನಾಚೇಗೌಡ, ದಾವಣಗೆರೆ ವಿಶ್ವವಿದ್ಯಾಲಯದ ನಿವೃತ್ತ ಕುಲಸಚಿವ ಪ್ರೊ. ಎನ್.ಕೆ.ಗೌಡ, ಪ್ರಜಾವಾಣಿ ಬ್ಯೂರೋ ಮುಖ್ಯಸ್ಥ ಸಿದ್ದಯ್ಯ ಹಿರೇಮಠ, ಪತ್ರಕರ್ತ ನಾಗರಾಜ್ .ಎಸ್ ಬಡದಾಳ್ ಮತ್ತಿತರರು ಉಪಸ್ಥಿತರಿರುವರು.

## ಪೂರ್ವಾನ್ವಯ ಆಗುವಂತೆ ಸಿಎಎ ಜಾರಿ

ನವದೆಹಲಿ, ಮಾ. 12 – ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮೂಲಕ ಪೂರ್ವಾನ್ವಯವಾಗುವಂತೆ ಭಾರತೀಯ ಪೌರತ್ವ ನೀಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಸಿ.ಎ.ಎ. ಅನ್ವಯ ಪೌರತ್ವಕ್ಕಾಗಿ ಅರ್ಜಿ ದಾಖಲಿಸಲು ಕೇಂದ್ರ ಸರ್ಕಾರ ವೆಬ್‌ಸೈಟ್ ಒಂದನ್ನು ಆರಂಭಿಸಿದೆ. ಅದರಲ್ಲಿ ಪೂರ್ವಾನ್ವಯವಾಗಿ ಪೌರತ್ವ ನೀಡುವ ಕುರಿತು ತಿಳಿಸಲಾಗಿದೆ. ಹತ್ತು, ಹದಿನೈದು ಇಲ್ಲವೇ 25 ವರ್ಷಗಳ ಹಿಂದೆ ಯಾವಾಗ ಭಾರತಕ್ಕೆ ಬಂದಿದ್ದರೋ, ಆಗಿನ ದಿನಾಂಕವನ್ನು ಅರ್ಜಿಯ ವೇಳೆ ನಮೂದಿಸಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ.

**ರಂಜಾನ್ ರೋಜಾ ಸಮಯ**

ದಿನಾಂಕ : 13.03.2024
ಇಫ್ತಾರ್ ಸಮಯ : 6.42
ದಿನಾಂಕ : 14.03.2024
ಸಹೇರಿ ಸಮಯ : 5.16





